

# “ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳ ಸಂಕಲನ”

ಅಖಿಲ ಭಾರತ ಪತ್ರಿಕೆ

ಅಕ್ಟೋಬರ್ – 2013



*"There is no greater pride and glory than to be a perfect instrument of the Master."*

- Sri Aurobindo

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### "ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳ ಸಂಕಲನ"

**ಅನು : ಡಾ. ಕೆ.ಎಸ್. ಆಮೂರ**

ತರುಣರಿಗೊಂದು ಕರೆ 3
ಅತ್ಯಂತ ಹೆಚ್ಚಿನ ಘನತೆಯಿರುವ ಸಾಹಸಗಳು 3
ಆಂತರಿಕ ಅಭೀಪ್ಸೆ ಪರಿಸ್ಥಿತಿಗಳನ್ನು ವ್ಯವಸ್ಥಿತಗೊಳಿಸುತ್ತದೆ 4
ನಿರಾಶಾವಾದ – ಪಿಶಾಚಿಯ ಒಂದು ಶ್ರೇಷ್ಠ ಶಸ್ತ್ರ 6
ಶಾಂತಿಯ ಮೂಲಕ ಮುಕ್ತಿ ಹಾಗೂ ಪ್ರಗತಿಯ ಮೂಲಕ ಮುಕ್ತಿ 8
ನಿಜವಾದ ಪ್ರಗತಿ ಸಾಧನೆಯಾಗಿದೆ 8
ಪ್ರಗತಿ ಸಾಧಿಸುವುದಕ್ಕಾಗಿ ಮೂರು ರೀತಿಗಳು 9
ಆಸೆಯ ಉದ್ದೇಶವನ್ನು ಅಭೀಪ್ಸೆಯ ಎತ್ತರಕ್ಕೇರಿಸುವುದು 10
ನಂಬಿಕೆಯೊಂದಿಗೆ ಅಭೀಪ್ಸೆಪಡಿರಿ 10
ಶ್ರೀಮಾತೆಯ ಮಹಾಕಾಳಿ ಮುಖ 11
ಒಂದು ಕ್ಯಾಲ್ಡಿಯನ್ ಪುರಾಣ ಕತೆ 14
ದುರ್ಗಾ 15
ಅತ್ಯಂತ ಒಳ್ಳೆಯ ಮನೋಭಾವ 16
"ನಾನು ನಿನ್ನವನಾಗಲು ಬಯಸುತ್ತೇನೆ" 17
ಭೌತಿಕ ದೇಹ ಹಾಗೂ ಜೀವನಕ್ಕೆ ಮೂಲ ಕಾರಣ 17
ಭಗವಂತನಲ್ಲದೆ ಬೇರೇನೂ ಇಲ್ಲ 18
ದೇವ ಮತ್ತು ವಿಶ್ವ 19
ಪ್ರಶ್ನೋತ್ತರಗಳು 20
ನಂತರ ಅನುಸರಿಸಿದರಾದೀತು ಎಂದು ಭಾವಿಸಿರುವ ಪಥ (ಕತೆ) 22
ಸ್ವಪ್ನ ನೌಕೆ (ಕವಿತೆ) 27
**ವಾರ್ತಾಪತ್ರ** 28

# "ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಬರಹಗಳ ಸಂಕಲನ"

## ತರುಣರಿಗೊಂದು ಕರೆ

ತರುಣರಾದ ನೀವು ದೇಶ ಭರವಸೆ ತಾಳುವುದಕ್ಕೆ ಆಧಾರವಾಗಿದ್ದೀರಿ. ಈ ನಿರೀಕ್ಷೆಗೆ ತಕ್ಕಂತೆ ನೀವು ನಿಮ್ಮನ್ನು ತಯಾರು ಮಾಡಿಕೊಳ್ಳಬೇಕು.

*

ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ ಎಂಬುದರ ಬಗ್ಗೆ ನೀವು ನಿಶ್ಚಿಂತೆಯಿಂದಿರಬಹುದು, ನೀವಾಗಬೇಕೆಂದು ಬಯಸಿದ ಮನುಷ್ಯ ನೀವಾಗುವಿರಿ. ನಿಮ್ಮ ಆದರ್ಶ ಹಾಗೂ ಅಭೀಪ್ಸೆ ಹೆಚ್ಚು ಉಚ್ಚವಾಗಿದ್ದಾಗ ನಿಮ್ಮ ಸಿದ್ಧಿಯೂ ಕೂಡ ಅಷ್ಟೇ ಉಚ್ಚತರದ್ದಾಗಿರುತ್ತದೆ. ಆದರೆ ನೀವು ದೃಢ ನಿರ್ಧಾರವನ್ನು ಕಾಪಾಡಿಕೊಂಡು ಬರಬೇಕು ಮತ್ತು ನಿಮ್ಮ ಜೀವನದ ಗುರಿಯನ್ನು ಎಂದೂ ಮರೆಯಬಾರದು.

*

ತಿಳಿದುಕೊಳ್ಳಲು ಇನ್ನೂ ಉಳಿದುಕೊಂಡಿರುವ ವಿಷಯಕ್ಕೆ ಹೋಲಿಸಿದರೆ ನೀವು ತಿಳಿದುಕೊಂಡದ್ದು ಏನೂ ಅಲ್ಲ, ಇನ್ನೂ ಕೈಕೊಳ್ಳಬೇಕಾದುದಕ್ಕೆ ಹೋಲಿಸಿದರೆ ನೀವು ಕೈಕೊಂಡದ್ದು ಕೇವಲ ಪ್ರಾರಂಭ ಬಿಂದು ಎಂದು ನಿಮಗೆ ಮನವರಿಕೆಯಾದಾಗ, ಇನ್ನೂ ಸಿದ್ಧಿಸಿಕೊಳ್ಳಬೇಕಾದ ಅಸಂಖ್ಯಾತ ಸಾಧ್ಯತೆಗಳೊಂದಿಗೆ ಹೊಳೆಯುವ ಆಕರ್ಷಕ ಸೂರ್ಯನಿರುವ ಹಾಗೆ ಭವಿಷ್ಯತ್ತನ್ನು ನೀವು ನೋಡಿದಾಗ, ಪೃಥ್ವಿಯ ಮೇಲೆ ನೀವು ಕಳೆದ ವರ್ಷಗಳು ಎಷ್ಟೇ ಆಗಿರಲಿ, ನಾಳಿನ ಎಲ್ಲ ಸಿದ್ಧಿಗಳೊಂದಿಗೆ ನೀವು ತರುಣರೂ, ಶ್ರೀಮಂತರೂ ಆಗಿರುತ್ತೀರಿ.

ನಿಮ್ಮ ದೇಹ ನಿಮಗೆ ಕೈಕೊಡಬಾರದು ಎಂದು ನೀವು ಬಯಸುತ್ತಿದ್ದರೆ ನಿರುಪಯುಕ್ತ ತಳಮಳದಲ್ಲಿ ನಿಮ್ಮ ಚೈತನ್ಯವನ್ನು ಹಾಳುಮಾಡುವುದರಿಂದ ದೂರವಿರಿ. ಕೈಕೊಳ್ಳುತ್ತಿರುವುದು ಏನೇ ಆಗಿರಲಿ, ಅದನ್ನು ನೀವು ಅಚಂಚಲತೆ ಹಾಗೂ ನೆಮ್ಮದಿ ಇರುವ ಸಮಚಿತ್ತತೆಯಿಂದ ಕೈಕೊಳ್ಳಿರಿ.

**(12/122–23)** **– ಶ್ರೀಮಾತೆ**

*

## ಅತ್ಯಂತ ಹೆಚ್ಚಿನ ಘನತೆಯಿರುವ ಸಾಹಸಗಳು

ಜೀವನ ಅದಿರುವ ಹಾಗಿದ್ದಾಗ, ಮಾನವ ಪ್ರಜ್ಞೆ ಅದಿರುವ ಹಾಗೆ ಇದ್ದಾಗ ಒಂದು ಕ್ಷಣವಿರುತ್ತದೆ, ಆಗ ಅದನ್ನು ಸಹಿಸಿಕೊಳ್ಳುವುದು ಸಂಪೂರ್ಣವಾಗಿ



ಅಸಾಧ್ಯವಾಗಿರುವಂತೆ ತೋರಿಬರುತ್ತದೆ, ಅದು ಒಂದು ಬಗೆಯ ಜುಗುಪ್ಸೆಯನ್ನು, ಅಸಾಮಂಜಸ್ಯವನ್ನು ಸೃಷ್ಟಿಸುತ್ತದೆ, “ಇಲ್ಲ ಇದು ಅದಲ್ಲ, ಅದು ಆಗಿರಲಾರದು; ಅದು ಮುಂದುವರಿಯಲಾರದು” ಎಂದು ನೀವು ಹೇಳುತ್ತೀರಿ. ಸರಿ, ಮನುಷ್ಯ ಒಮ್ಮೆ ಈ ಸ್ಥಿತಿಯನ್ನು ತಲುಪಿದಾಗ ಮನಸ್ಸಿನ ಎಲ್ಲ ಪ್ರಯತ್ನವನ್ನು, ತನ್ನ ಎಲ್ಲ ಸತ್ತೆಯನ್ನು, ಬಲವನ್ನು, ಜೀವನವನ್ನು ಹೀಗೆ ಎಲ್ಲವನ್ನೂ, ನಿಮಗೆ ಇಷ್ಟವಾದರೆ, ಈ ಅವಕಾಶದ ನಡುವೆ ಸೇರಿಸಬೇಕು ಇಲ್ಲವೆ ಇನ್ನೊಂದು ಬದಿಗೆ ಸಾಗಿ ಹೋಗಲು ಕೊಡಲಾದ ಅಸಾಧಾರಣ ಸಂದರ್ಭದ ನಡುವೆ ಸೇರಿಸಬೇಕು. ನಿಮ್ಮನ್ನು ಬೇರೆಡೆ ಕರೆದೊಯ್ಯುವ ಈ ಹೊಸ ಮಾರ್ಗದ ಮೇಲೆ ಹೆಜ್ಜೆ ಇರಿಸುವುದು ಎಷ್ಟೊಂದು ನೆಮ್ಮದಿ ತಂದುಕೊಡುತ್ತದೆ! ಆ ಜಿಗಿತವನ್ನು ಮಾಡುವುದಕ್ಕಾಗಿ ಹೆಚ್ಚಿನ ಗಂಟುಮೂಟೆಯನ್ನು, ಹಲವಾರು ವಿಷಯಗಳನ್ನು ಹಿಂದೆ ಎಸೆದುಬಿಡುವುದಕ್ಕೆ ಮಾಡುವ ಪ್ರಯತ್ನ ಯಥಾಯೋಗ್ಯವಾಗಿರುತ್ತದೆ. ನಾವು ಸಮಸ್ಯೆಯನ್ನು ನೋಡುವ ರೀತಿ ಹಾಗಿದೆ.

ವಾಸ್ತವದಲ್ಲಿ ಅದು ಘನತೆವೆತ್ತ ಸಾಹಸಗಳಲ್ಲೊಂದು. ಮತ್ತು ಮನುಷ್ಯನಲ್ಲಿ ನಿಜವಾದ ಸಾಹಸದ ಮನೋಭಾವ ಕಿಂಚಿತ್ತಾದರೂ ಇದ್ದಿತಾದರೆ ಎಲ್ಲದಕ್ಕೂ ಎಲ್ಲ ಅಪಾಯ ಎದುರಿಸುವುದು ಯೋಗ್ಯವಾಗಿರುತ್ತದೆ.

**(7/323)** **– ಶ್ರೀಮಾತೆ**

*

## ಆಂತರಿಕ ಅಭೀಪ್ಸೆ ಪರಿಸ್ಥಿತಿಗಳನ್ನು ವ್ಯವಸ್ಥಿತಗೊಳಿಸುತ್ತದೆ

ಆಂತರಿಕ ಅಭೀಪ್ಸೆಯು ಗಾಢತೆಯ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ. ಪ್ರಜ್ಞಾಪೂರ್ವಕ ಅಭೀಪ್ಸೆಯ ಸ್ಥಿತಿಯಲ್ಲಿ ನೀವಿದ್ದರೆ, ನಿಷ್ಕಪಟರಾಗಿದ್ದರೆ ಸರಿ, ನಿಮ್ಮ ಸುತ್ತಲಿರುವ ಎಲ್ಲವನ್ನೂ ಆ ಅಭೀಪ್ಸೆಗೆ ಸಹಾಯಕವಾಗುವಂತೆ ವ್ಯವಸ್ಥಿತಗೊಳಿಸಲಾಗುವುದು. ಅದು ನೇರವಾಗಿರಬಹುದು ಇಲ್ಲವೆ ಅಪರೋಕ್ಷವಾಗಿರಬಹುದು, ಎಂದರೆ ನೀವು ಪ್ರಗತಿ ಸಾಧಿಸುವಂತೆ ಮಾಡುವುದಾಗಿರಬಹುದು, ಹೊಸತೊಂದು ವಿಷಯದ ಸಂಪರ್ಕ ಬರುವಂತೆ ಮಾಡುವುದಾಗಿರಬಹುದು ಇಲ್ಲವೆ ನಿಮ್ಮ ಸ್ವಭಾವದಿಂದ ಮಾಯವಾಗಿರಬೇಕಾದ ಏನೋ ಒಂದನ್ನು ತೆಗೆದುಹಾಕುವುದಾಗಿರಬಹುದು. ಇದು ಬಹಳ ಅಸಾಧಾರಣವಾಗಿರುವ ಏನೋ ಒಂದು. ನೀವು ನಿಜವಾಗಿ ಅಭೀಪ್ಸೆ ಹೊಂದಿರುವ ಸ್ಥಿತಿಯ ಗಾಢತೆಯಲ್ಲಿದ್ದರೆ ಈ ಅಭೀಪ್ಸೆಯನ್ನು

ನೆರವೇರಿಸಿಕೊಡಲು ಸಹಾಯ ನೀಡದೆ ಇರುವ ಯಾವ ಪರಿಸ್ಥಿತಿಯೂ ಇರುವುದಿಲ್ಲ. ಪ್ರತಿಯೊಂದೂ ಬರುತ್ತದೆ, ಅಲ್ಲಿ ನಿಮ್ಮ ಸುತ್ತ ಎಲ್ಲ ವಿಷಯಗಳನ್ನು ಪರಿಪೂರ್ಣ ಹಾಗೂ ಸಂಪೂರ್ಣ ಪ್ರಜ್ಞೆಯಿಂದ ವ್ಯವಸ್ಥಿತಗೊಳಿಸುವ ಪ್ರತಿಯೊಂದೂ ಬರುತ್ತದೆ ಮತ್ತು ನೀವೇ ಸ್ವತಃ ನಿಮ್ಮ ಬಾಹ್ಯ ಪ್ರಜ್ಞೆಯಲ್ಲಿ ಅದನ್ನು ಗುರುತಿಸದೆ ಇರಬಹುದು ಮತ್ತು ಮೊದಲು ತೋರಿಸಿಕೊಳ್ಳುವ ಪರಿಸ್ಥಿತಿಗಳ ವಿರುದ್ಧ ಪ್ರತಿಭಟಿಸಬಹುದು, ದೂರಿಕೊಳ್ಳಬಹುದು, ಅವುಗಳನ್ನು ಬದಲಾಯಿಸಲು ಪ್ರಯತ್ನಿಸಬಹುದು, ಆದರೆ ಕೆಲ ಕಾಲದ ನಂತರ, ನೀವು ಹೆಚ್ಚು ಜಾಣರಾದಾಗ ಮತ್ತು ಆ ಘಟನೆ ನಿಮ್ಮಿಂದ ಸ್ವಲ್ಪ ದೂರದಲ್ಲಿದ್ದಾಗ, ಸರಿ, ಅವಶ್ಯವಾದ ಪ್ರಗತಿಯನ್ನು ಸಾಧಿಸಲು ನಿಮಗೆ ಅವಶ್ಯವಾದದ್ದು ಅದೇ ಆಗಿತ್ತು ಎಂಬುದನ್ನು ಅರಿತುಕೊಳ್ಳುವಿರಿ. ಮತ್ತು ಅದು ಒಂದು ಸಂಕಲ್ಪ, ಪರಮೋಚ್ಚ ಸದಿಚ್ಛೆ, ಅದು ನಿಮ್ಮ ಸುತ್ತ ಎಲ್ಲ ವಿಷಯಗಳನ್ನು ವ್ಯವಸ್ಥಿತಗೊಳಿಸುತ್ತದೆ, ಮತ್ತು ನೀವು ದೂರುತ್ತಿದ್ದಾಗ, ಅದನ್ನು ಸ್ವೀಕರಿಸುವುದರ ಬದಲಾಗಿ ಪ್ರತಿಭಟಿಸುತ್ತಿದ್ದಾಗ, ನಿಖರವಾಗಿ, ಅಂತಹದೇ ಕ್ಷಣಗಳಲ್ಲಿ ಅದು ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯಕೈಕೊಳ್ಳುತ್ತದೆ.

ಬುಲೆಟಿನ್ (Bulletin) ದಲ್ಲಿ ನಾನು ಬರೆದಿದ್ದ ಚಿಕ್ಕ ವಾಕ್ಯವೊಂದಿದೆ. (ಅದರಲ್ಲಿ ಶಬ್ದಗಳು ಈಗ ನನಗೆ ಸರಿಯಾಗಿ ನೆನಪಿಗೆ ಬರುತ್ತಿಲ್ಲ*) ಗಾಢ ನಂಬಿಕೆಯೊಂದಿಗೆ "ನನಗೆ ನೀನೊಬ್ಬನೇ ಬೇಕು" ಎಂದು ಹೇಳಿದಿರಾದರೆ ಭಗವಂತ ಎಲ್ಲ ಪರಿಸ್ಥಿತಿಗಳನ್ನು ಹೇಗೆ ವ್ಯವಸ್ಥಿತಗೊಳಿಸುತ್ತಾನೆಂದರೆ ನೀವು ನಿಷ್ಕಪಟರಾಗಿರುವುದಕ್ಕೆ ಒತ್ತಾಯ ಬರುತ್ತದೆ. ಸತ್ತೆಯೊಳಗಿರುವ ಏನೋ ಒಂದು "ನನಗೆ ನೀನೊಬ್ಬನೇ ಬೇಕು" ಎಂದು ಹೇಳುತ್ತದೆ, ಅದು ಅಭೀಪ್ಸೆ, ಮತ್ತು ನಂತರ ಎಲ್ಲ ಕಾಲದಲ್ಲಿ ಮನುಷ್ಯನಿಗೆ ನೂರಾರು ಅನ್ಯ ಅಗತ್ಯಗಳಿರುತ್ತವೆ, ಅದು ಹಾಗಿರುತ್ತದಲ್ಲವೆ? ಕೆಲವೊಮ್ಮೆ ಏನೋ ಒಂದು ಬರುತ್ತದೆ ... ಅತ್ಯಲ್ಪವಾದದ್ದು ... ಅದು ಪ್ರತಿಯೊಂದಕ್ಕೂ ಕ್ಷೋಭೆಯನ್ನುಂಟು ಮಾಡುತ್ತದೆ, ನಿಮ್ಮ ಅಭೀಪ್ಸೆಯನ್ನು ಸಿದ್ಧಿಸಿಕೊಳ್ಳುವ ಮಾರ್ಗದಲ್ಲಿ ಅದು ಅಡ್ಡ ಬರುತ್ತದೆ ಮತ್ತು ಸಿದ್ಧಿಸಿಕೊಳ್ಳುವುದಕ್ಕೆ ತಡೆ ಉಂಟುಮಾಡುತ್ತದೆ. ಸರಿ, ಭಗವಂತ ತನ್ನನ್ನು ತೋರಿಸಿಕೊಳ್ಳದೆ, ನೀವು

---

* ನೀನು ಶ್ರದ್ಧಾಪೂರ್ವಕವಾಗಿ ಭಗವಂತನಿಗೆ "ನನಗೆ ನೀನಷ್ಟೇ ಬೇಕು" ಎಂದು ಹೇಳಿದರೆ ಭಗವಂತ ಪರಿಸ್ಥಿತಿಗಳನ್ನು ಹೇಗೆ ವ್ಯವಸ್ಥಿತಗೊಳಿಸುತ್ತಾನೆಂದರೆ ನೀನು ನಿಷ್ಕಪಟನಾಗಿರುವುದಕ್ಕೆ ಒತ್ತಾಯವುಂಟಾಗುತ್ತದೆ.



ಅವನನ್ನು ನೋಡಲಾಗದ ರೀತಿಯಲ್ಲಿ, ಯಾವ ಸುಳಿವನ್ನೂ ನೀಡದೆ ಬರುತ್ತಾನೆ, ಅವನು ಎಲ್ಲ ಪರಿಸ್ಥಿತಿಗಳನ್ನು ಹೇಗೆ ವ್ಯವಸ್ಥಿತಗೊಳಿಸುತ್ತಾನೆಂದರೆ ನೀವು ಕೇವಲ ಭಗವಂತನಿಗೆ ಸೇರಿರುವುದನ್ನು ತಡೆಯುವ ಪ್ರತಿಯೊಂದನ್ನು ನಿಮ್ಮ ಮಾರ್ಗದಿಂದ, ಅನಿವಾರ್ಯವೆಂಬಂತೆ, ತೆಗೆದು ಹಾಕಲಾಗುವುದು. ಎಲ್ಲವನ್ನೂ ತೆಗೆದು ಹಾಕಿದಾಗ ನೀವು ಗೋಳಿಡಲು, ದೂರಲು ಪ್ರಾರಂಭಿಸುತ್ತೀರಿ, ಆದರೆ ನಂತರ, ನೀವು ನಿಷ್ಕಪಟರಾಗಿದ್ದರೆ ಮತ್ತು ನಿಮ್ಮತ್ತ ನೀವು ಕಣ್ಣಿಟ್ಟು ನೇರವಾಗಿ ನೋಡಿದರೆ ನೀವು ದೈವೀ ಪ್ರಭುವಿಗೆ "ನಾನು ಕೇವಲ ನಿನ್ನನ್ನು ಬಯಸುತ್ತೇನೆ" ಎಂದು ಹೇಳಿರುತ್ತೀರಿ, ಅವನು ನಿಮ್ಮ ಹತ್ತಿರವೇ ಇರುತ್ತಾನೆ, ಉಳಿದದ್ದೆಲ್ಲ ಹೊರಟು ಹೋಗುತ್ತದೆ, ಇದು ನಿಜವಾಗಿ ಉಚ್ಚತರ ದೈವೀ ಕೃಪೆ. ಆದರೆ ನೀವು ಅದನ್ನು ಕೇವಲ ಗಾಢ ನಂಬಿಕೆಯಿಂದ ಹೇಳಬೇಕು. ನೀವು ಸಮಗ್ರವಾಗಿ ಹೇಳಿರಿ ಎಂಬ ಅರ್ಥದಲ್ಲಿ ನಾನು ಹೇಳುತ್ತಿಲ್ಲ, ಏಕೆಂದರೆ ಅದನ್ನು ಮನುಷ್ಯ ಸಮಗ್ರವಾಗಿ ಹೇಳಿದನಾದರೆ ಕಾರ್ಯ ಮುಗಿದು ಹೋಗುತ್ತದೆ. ಅವಶ್ಯವಾದದ್ದು ಏನೆಂದರೆ ಸತ್ತೆಯ ಒಂದು ಭಾಗ, ನಿಜವಾಗಿ ಕೇಂದ್ರಸತ್ತೆ ಅದನ್ನು ಗಾಢ ನಂಬಿಕೆಯಿಂದ ಹೇಳುತ್ತದೆ: "ನನಗೆ ಕೇವಲ ನೀನು ಬೇಕು" ಎಂದು. ಒಮ್ಮೆ ಹಾಗೆ ಹೇಳಿದರೆ ಸಾಕಾಗುತ್ತದೆ: ಅದೆಲ್ಲ ಹೆಚ್ಚು ಕಡಿಮೆ ದೀರ್ಘಕಾಲ ತೆಗೆದುಕೊಳ್ಳುತ್ತದೆ, ಕೆಲವೊಮ್ಮೆ ಅದು ಹಲವಾರು ವರ್ಷಗಳ ಕಾಲ ಹರಡಿರುತ್ತದೆ, ಆದರೆ ಮನುಷ್ಯ ಗುರಿಯನ್ನು ತಲುಪುತ್ತಾನೆ.

**ಪ್ರಶ್ನೆ :** *ಆದರೆ ಮನುಷ್ಯನಲ್ಲಿ ಎಲ್ಲ ಬಗೆಯ ಅಪರಿಪೂರ್ಣತೆಗಳಿರುತ್ತವೆ.*

**ಶ್ರೀಮಾತೆ :** ಹೌದೇ? ಅಪರಿಪೂರ್ಣತೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾಗ ಸಿದ್ಧಿಸಿಕೊಳ್ಳುವುದಕ್ಕೆ ದೀರ್ಘಕಾಲ ಬೇಕಾಗುತ್ತದೆ, ಮನುಷ್ಯನಲ್ಲಿ ಆಸಕ್ತಿಗಳು ಹೆಚ್ಚಿನ ಪ್ರಮಾಣದಲ್ಲಿದ್ದರೆ ಆಗಲೂ ಕೂಡ ದೀರ್ಘ ಸಮಯ ಬೇಕಾಗುತ್ತದೆ.

**(6/175–76)** **– ಶ್ರೀಮಾತೆ**

*

## ನಿರಾಶಾವಾದ – ಪಿಶಾಚಿಯ ಒಂದು ಶ್ರೇಷ್ಠ ಶಸ್ತ್ರ

ಎಲ್ಲ ನಿರಾಶಾವಾದ ದಿವ್ಯಾತ್ಮನನ್ನು ಅವನ ಪೂರ್ಣತೆಯನ್ನು ಹಾಗೂ ಸಾಮರ್ಥ್ಯವನ್ನು ನಿರಾಕರಿಸುವುದಾಗಿದೆ, ಜಗತ್ತಿನಲ್ಲಿ ಭಗವಂತನ ರೀತಿಗಳಿಗೆ ಅಸಹನೆ ತೋರಿಸುವುದಾಗಿದೆ, ಜಗತ್ತನ್ನು ಸೃಷ್ಟಿಸಿದ ಹಾಗೂ ಅದಕ್ಕೆ ಎಲ್ಲ ಕಾಲಕ್ಕೂ

ಮಾರ್ಗದರ್ಶನ ಮಾಡುವ ದೈವೀ ವಿವೇಕದಲ್ಲಿ ಸಾಕಷ್ಟು ನಂಬಿಕೆ ಹೊಂದಿರದೆ ಇರುವುದಾಗಿದೆ.

ನಿರಾಶಾವಾದ ಪರಮೋಚ್ಚ ವಿವೇಕ ಹಾಗೂ ಸಾಮರ್ಥ್ಯದ ಬಗ್ಗೆ ತಪ್ಪು ಕಲ್ಪನೆಯನ್ನು ಒಪ್ಪಿಕೊಳ್ಳುತ್ತದೆ, ಹಾಗಾಗಿ ಅದೇ ಸ್ವತಃ ಪರಮೋಚ್ಚ ವಿವೇಕ ಹಾಗೂ ಸಾಮರ್ಥ್ಯವಾಗಲಾರದು ಹಾಗೂ ಅದರಿಂದ ಜಗತ್ತು ತನ್ನ ಇಡೀ ಜೀವನವನ್ನು ಭಗವಂತನತ್ತ ಮೇಲಕ್ಕೆತ್ತಿ ಹಿಡಿಯಲು ಮಾರ್ಗದರ್ಶನ ಪಡೆಯುವುದು ಸಾಧ್ಯವಾಗುವುದಿಲ್ಲ.

*

ಭಾರತೀಯ ಧಾರ್ಮಿಕ ಮನಸ್ಸು ಜೀವನವನ್ನು ಭಗವಂತನ ಲೀಲೆ ಎಂದು ಸ್ವೀಕರಿಸುತ್ತದೆ ಮತ್ತು ಪ್ರತಿಯೊಂದು ಮಾನವ ಸತ್ತೆಗಾಗಿ ನಮ್ಮ ಸದ್ಯದ ಪರಿಸ್ಥಿತಿಗಳಿಂದಾಚೆಗೆ ಭಗವಂತನಿಗೆ ಶಾಶ್ವತವಾಗಿ ಹತ್ತಿರವಾಗಿರುವುದನ್ನು ನೋಡುತ್ತದೆ

ದೈವತ್ವದಲ್ಲಿ ಪ್ರಕಾಶಮಯ ಆರೋಹಣ ಮನುಷ್ಯನ ಹಿಡಿತಕ್ಕೆ ಸಿಗಬಹುದಾದ ಒಂದು ಪರಾಕಾಷ್ಠೆಯೆಂದು ಯಾವಾಗಲೂ ಗ್ರಹಿಸಲಾಗಿತ್ತು.

**(25/179, 20/131)** **– ಶ್ರೀ ಅರವಿಂದರು**

*

ನಿರಾಶಾವಾದ ಪಿಶಾಚಿಯ ಶಸ್ತ್ರ, ಪಿಶಾಚಿ ತನ್ನ ಸನ್ನಿವೇಶವನ್ನು ಪತ್ತೆ ಮಾಡುತ್ತಾನೆ. (ಶ್ರೀಮಾತೆಯವರು ಅಲುಗಾಡುವ ಸಂಜ್ಞೆ ಮಾಡುತ್ತಾರೆ) ಸರಿ, ಯಾವುದು ಸಾಧ್ಯವಿದೆಯೆಂದು ನಾನು ನೋಡುತ್ತಿರುವೆನೋ ಅದನ್ನು ಸಿದ್ಧಿಸಿಕೊಂಡರೆ, ಅದು, ನಿಜವಾಗಿ, ವಿರೋಧೀ ಶಕ್ತಿಗಳ ಮೇಲೆ ನಿರ್ಣಾಯಕ ವಿಜಯವಾಗುತ್ತದೆ. – ಸ್ವಾಭಾವಿಕವಾಗಿ ನಿರಾಶಾವಾದದ ಪಿಶಾಚಿ ತನ್ನನ್ನು ಸಾಧ್ಯವಿದ್ದಷ್ಟು ರಕ್ಷಿಸಿಕೊಳ್ಳುತ್ತದೆ. ನೀವು ನಿರಾಶಾವಾದದ ಬಾಲವನ್ನು ನೋಡಿದಾಗಲೂ ಕೂಡ ಅದು ಪಿಶಾಚಿಯೇ ಆಗಿರುತ್ತದೆ. ನಿರಾಶಾವಾದ ಪಿಶಾಚಿಯ ಶ್ರೇಷ್ಠ ಶಸ್ತ್ರ.

**(11/176–77)** **– ಶ್ರೀಮಾತೆ**

*



## ಶಾಂತಿಯ ಮೂಲಕ ಮುಕ್ತಿ ಹಾಗೂ ಪ್ರಗತಿಯ ಮೂಲಕ ಮುಕ್ತಿ

ಮನುಷ್ಯರ ಮಧ್ಯೆ ದೈವೀ ಕೃಪೆಯ ಮುಕ್ತಿದಾಯಕ ಕ್ರಿಯೆಯ ಒಂದಕ್ಕೊಂದು ಪೂರಕವಾದ ಎರಡು ಮುಖಗಳಿವೆ. ಇವೆರಡೂ ಮುಖಗಳು ಸಮನಾಗಿ ಅತ್ಯಗತ್ಯದ್ದಾಗಿವೆ, ಆದರೆ ಅವೆರಡಕ್ಕೂ ಸಮನಾದ ಮೆಚ್ಚಿಗೆ ನೀಡಲಾಗುತ್ತಿಲ್ಲ.

ಬದಲಾಗದ ಸಾರ್ವಭೌಮ ಶಾಂತಿಯು ತಳಮಳ, ಉದ್ವಿಗ್ನತೆ ಮತ್ತು ವೇದನೆಗಳಿಂದ ಮುಕ್ತಿ ನೀಡುತ್ತದೆ.

ಕ್ರಿಯಾಶೀಲ, ಸರ್ವ ಸಾಮರ್ಥ್ಯಪೂರ್ಣ ಪ್ರಗತಿ ಬೇಡಿಗಳಿಂದ, ಬಂಧನಗಳಿಂದ ಮತ್ತು ಜಡತ್ವದಿಂದ ಮುಕ್ತಗೊಳಿಸುತ್ತದೆ.

ಶಾಂತಿಗೆ ವಿಶ್ವಂಭರ ಮೆಚ್ಚಿಗೆ ನೀಡಲಾಗುತ್ತದೆ ಮತ್ತು ಅದನ್ನು ದೈವಿಕವೆಂದು ಗುರುತಿಸಲಾಗುತ್ತದೆ, ಆದರೆ ಗಾಢವಾದ, ಧೈರ್ಯದಿಂದ ಒಡಗೂಡಿದ ಅಭೀಪ್ಸೆಯನ್ನು ಹೊಂದಿರುವವರು ಮಾತ್ರ ಪ್ರಗತಿಯನ್ನು ಸ್ವಾಗತಿಸುತ್ತಾರೆ.

**(15/185)** **– ಶ್ರೀಮಾತೆ**

*

## ನಿಜವಾದ ಪ್ರಗತಿ ಸಾಧನೆಯಾಗಿದೆ

ನಿಜವಾದ ಪ್ರಗತಿ ಸಾಧನೆಯಾಗಿದೆ ಎಂದರೆ ಅದು ಅತ್ಯಂತ ತೀವ್ರಗತಿಯ ಪ್ರಗತಿ, ಹಾಗಿಲ್ಲದಿದ್ದರೆ ಮನುಷ್ಯ ಪ್ರಕೃತಿಯ ಲಯಬದ್ಧತೆಗೆ ಅನುಗುಣವಾಗಿ ಪ್ರಗತಿ ಸಾಧಿಸುತ್ತಾನೆ, ಅದರರ್ಥ ಅಲ್ಪ, ಸ್ವಲ್ಪ ಪ್ರಗತಿಯನ್ನು ಸಾಧಿಸುವುದಕ್ಕೆ ಹಲವಾರು ಶತಮಾನಗಳು, ಸಹಸ್ರಾರು ವರ್ಷಗಳು ಬೇಕಾಗುತ್ತವೆ, ಆದರೆ ನಿಜವಾದ ಪ್ರಗತಿಯನ್ನು ಸಾಧನೆಯ ಮೂಲಕ ಮಾಡಲಾಗುತ್ತದೆ. ಕೊನೆಗಾಣಿಸದಷ್ಟು ಕಾಲ ತೆಗೆದುಕೊಳ್ಳಬಹುದಾದ ಪ್ರಗತಿಯನ್ನು ಮನುಷ್ಯ ಯೋಗದ ಮೂಲಕ ಬಹಳ ಕಡಿಮೆ ಸಮಯದಲ್ಲಿ ಮಾಡಬಹುದು. ಆದರೆ ಈ ಪ್ರಗತಿಯನ್ನು ದೇಹದಲ್ಲಿ ಮತ್ತು ಯಾವಾಗಲೂ ಪೃಥ್ವಿಯ ಮೇಲೆ ಸಾಧಿಸಬಹುದು, ಬೇರೆಡೆ ಎಲ್ಲಿಯೂ ಅದನ್ನು ಮಾಡಲಾಗದು. ಆದ್ದರಿಂದ ಮನುಷ್ಯ ದೇಹದಲ್ಲಿದ್ದಾಗ ಅದರ ಪ್ರಯೋಜನ ಪಡೆಯಬೇಕು ಮತ್ತು ತನ್ನ ಸಮಯವನ್ನು ಹಾಳು ಮಾಡಬಾರದು ಮತ್ತು "ಸ್ವಲ್ಪ ಕಾಲದ ನಂತರ, ಅನಂತರ" ಎಂದು ಹೇಳಬಾರದು. ಅದನ್ನು ಕೂಡಲೆ ಕೈಕೊಳ್ಳುವುದು ಬಹಳ ಒಳ್ಳೆಯದು. ಯಾವ ಪ್ರಗತಿಯನ್ನೂ ಸಾಧಿಸದೆ ಕಳೆದ

ವರ್ಷಗಳು ಹಾಳುಮಾಡಿದ ವರ್ಷಗಳು, ಅದರ ಬಗ್ಗೆ ನಂತರ ನೀವು ವಿಷಾದಿಸುವುದು ನಿಶ್ಚಿತ.

**(7/33)** **– ಶ್ರೀಮಾತೆ**

*

## ಪ್ರಗತಿ ಸಾಧಿಸುವುದಕ್ಕಾಗಿ ಮೂರು ರೀತಿಗಳು

ಸದಾ ಪ್ರಗತಿ ಸಾಧಿಸಬೇಕೆನ್ನುವವರಿಗೆ ಪ್ರಗತಿ ಸಾಧಿಸಲು ಮೂರು ಪ್ರಧಾನ ರೀತಿಗಳಿವೆ.

1. ಮನುಷ್ಯ ತನ್ನ ಪ್ರಜ್ಞೆಯ ಕ್ಷೇತ್ರವನ್ನು ವಿಸ್ತರಿಸುವುದು.
2. ಮನುಷ್ಯ ತಾನು ತಿಳಿದುಕೊಂಡದ್ದನ್ನು ಇನ್ನೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಹಾಗೂ ಸಂಪೂರ್ಣವಾಗಿ ತಿಳಿದುಕೊಳ್ಳುವುದು.
3. ಭಗವಂತನನ್ನು ಕಂಡುಕೊಳ್ಳುವುದು ಮತ್ತು ಅವನಿಗೆ ಹೆಚ್ಚು ಹೆಚ್ಚಾಗಿ ಶರಣಾಗತನಾಗುವುದು.

ಬೇರೆ ರೀತಿಯಲ್ಲಿ ಹೇಳುವುದಾದರೆ ಇದರರ್ಥ ಹೀಗಿದೆ:

1. ಉಪಕರಣ(ದೇಹದ)ದ ಸಾಧ್ಯತೆಗಳನ್ನು ಸತತ ಶ್ರೀಮಂತ–ಗೊಳಿಸುವುದು.
2. ನಿರಂತರವಾಗಿ ಈ ಉಪಕರಣದ ಕಾರ್ಯ ನೆರವೇರಿಸುವ ಕ್ಷಮತೆಯನ್ನು ಪರಿಪೂರ್ಣಗೊಳಿಸುವುದು.
3. ಈ ಉಪಕರಣ ಭಗವಂತನನ್ನು ಸ್ವೀಕರಿಸುವ ಹಾಗೂ ಅವನಿಗೆ ವಿಧೇಯವಾಗಿರುವ ಕ್ಷಮತೆಯನ್ನು ಹೆಚ್ಚಿಸುವುದು.

ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡು ಅವುಗಳನ್ನು ಕಾರ್ಯರೂಪದಲ್ಲಿ ತರುವುದು. ಭಗವಂತನಿಗೆ ಶರಣಾಗತನಾಗುವುದನ್ನು ತಡೆಯುವ ಎಲ್ಲದರಿಂದ ಮನುಷ್ಯ ಶುದ್ಧೀಕರಣಗೊಳ್ಳುವುದು, ಮನುಷ್ಯ ತನ್ನ ಪ್ರಜ್ಞೆ ದೈವೀ ಪ್ರಭಾವವನ್ನು ಹೆಚ್ಚು ಹೆಚ್ಚಾಗಿ ಸ್ವೀಕರಿಸುವಂತೆ ಮಾಡುವುದು.

ಹೇಳಬೇಕಾದುದು ಹೀಗಿದೆ: ಮನುಷ್ಯ ತನ್ನನ್ನು ಹೆಚ್ಚು ಹೆಚ್ಚಾಗಿ ವಿಸ್ತರಿಸಿಕೊಳ್ಳುವುದು, ಆಳಾತಿ ಆಳಕ್ಕೆ ಇಳಿದು ಹೋಗುವುದು, ಹೆಚ್ಚು ಸಂಪೂರ್ಣವಾಗಿ ಶರಣಾಗತನಾಗುವುದು.

**(16/435–36)** **– ಶ್ರೀಮಾತೆ**

*



## ಆಸೆಯ ಉದ್ದೇಶವನ್ನು ಅಭೀಪ್ಸೆಯ ಎತ್ತರಕ್ಕೇರಿಸುವುದು

ಮನುಷ್ಯ ಯಾವ ಆಸೆಯನ್ನೂ ಹೊಂದಿರಬಾರದು ಎಂದು ಹೇಳುವ ಬೋಧನೆಗಳಿವೆ. ಜೀವನದಿಂದ ಸಂಪೂರ್ಣವಾಗಿ ಹಿಂದೆಗೆದುಕೊಳ್ಳಬೇಕು, ಅದರಿಂದಾಗಿ ದಿವ್ಯಾತ್ಮದ ನಿಶ್ಚಲತೆಯಲ್ಲಿ ಪ್ರವೇಶಿಸಲು ಸಾಧ್ಯವಾಗುವುದು ಎಂದು ಹೇಳುತ್ತವೆ, ಅಲ್ಲಿ ಎಲ್ಲ ಚಟುವಟಿಕೆ, ಚಲನೆ, ರೂಪ ಹಾಗೂ ಬಾಹ್ಯ ನೈಜತೆ ಇವೆಲ್ಲ ಇರುವುದಿಲ್ಲ. ಆ ಸ್ಥಿತಿಯನ್ನು ಸಿದ್ಧಿಸಿಕೊಳ್ಳಲು ಯಾವ ಆಸೆಯೂ ಇರಬಾರದು, ಅದರರ್ಥ ಪ್ರಗತಿಗಾಗಿ ಇರುವ ಎಲ್ಲ ಸಂಕಲ್ಪವನ್ನು ಸಂಪೂರ್ಣವಾಗಿ ಹಿಂದೆ ಬಿಟ್ಟುಕೊಡಬೇಕು. ಪ್ರಗತಿಯೇ ಸ್ವತಃ ನೈಜತೆಯಿರದ ಹಾಗೂ ಬಾಹ್ಯದಲ್ಲಿರುವ ಒಂದು ವಿಷಯವಾಗುತ್ತದೆ. ಆದರೆ ಯೋಗದ ಬಗೆಗಿರುವ ನಿಮ್ಮ ಕಲ್ಪನೆಯಲ್ಲಿ ನೀವು ಪ್ರಗತಿಯ ವಿಚಾರವನ್ನಿಟ್ಟುಕೊಂಡಿದ್ದರೆ ಮತ್ತು ಇಡೀ ವಿಶ್ವ ಪ್ರಗತಿಯ ಮಾರ್ಗವನ್ನು ಅನುಸರಿಸುತ್ತಿದೆ ಎಂಬುದನ್ನು ಒಪ್ಪಿಕೊಂಡರೆ ಆಗ ನೀವು ಮಾಡಬೇಕಾದುದೇನೆಂದರೆ ಆಸೆಯ ಉದ್ದೇಶವನ್ನು ಮೇಲಕ್ಕೆತ್ತಬೇಕು, ಅದನ್ನು ಬಾಹ್ಯ, ಕೃತ್ರಿಮ, ಮೇಲ್ಮೈಯಲ್ಲಿರುವ, ಅಹಂಕಾರದಿಂದ ಕೂಡಿದ ವಿಷಯಗಳತ್ತ ಹೊರಳಿಸಬಾರದು; ನೀವು ಅದನ್ನು ದೈವೀ ಸತ್ಯದತ್ತ ನಿರ್ದೇಶಿಸಲಾದ ಅಭೀಪ್ಸೆಯನ್ನು ಸಿದ್ಧಿಸಿಕೊಳ್ಳುವ ಶಕ್ತಿಯೊಂದಿಗೆ ಜೋಡಿಸಬೇಕು.

ದೈವೀ ಸತ್ಯವನ್ನು ತಲುಪುವುದಕ್ಕಾಗಿ ಮತ್ತು ಈ ದೈವೀ ಸತ್ಯವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಅವಶ್ಯವಾದ ಸಾಮರ್ಥ್ಯವನ್ನು ಹೊಂದುವುದಕ್ಕಾಗಿ ನೀವು ಆಧ್ಯಾತ್ಮಿಕ ಪ್ರಜ್ಞೆಯನ್ನು ಪ್ರಗತಿಪರ ಮಾನಸಿಕ ಪ್ರಜ್ಞೆಯೊಂದಿಗೆ ಜೋಡಿಸಬೇಕು ಎಂದು ಶ್ರೀ ಅರವಿಂದರು ನಮಗೆ ಹೇಳುತ್ತಾರೆ.

**(3/194)** **– ಶ್ರೀಮಾತೆ**

*

## ನಂಬಿಕೆಯೊಂದಿಗೆ ಅಭೀಪ್ಸೆಪಡಿರಿ

ಮನುಷ್ಯ ಯಾವುದಕ್ಕಾಗಿಯಾಗಲಿ ಅಭೀಪ್ಸೆಪಟ್ಟಾಗ, ಅದೇ ವೇಳೆಗೆ ಅವನು ತನ್ನ ಅಭೀಪ್ಸೆಯನ್ನು ಕೇಳಿಸಿಕೊಳ್ಳಲಾಗುವುದು ಹಾಗೂ ಸಾಧ್ಯವಿದ್ದಷ್ಟು ಅತ್ಯಂತ ಒಳ್ಳೆಯ ರೀತಿಯಲ್ಲಿ ಅದಕ್ಕೆ ಉತ್ತರ ದೊರಕುವುದು ಎಂಬುದನ್ನು ತಿಳಿದುಕೊಂಡಿದ್ದರೆ ಅದು ಸತ್ತೆಯಲ್ಲಿ, ಅದರ ಕಂಪನಗಳಲ್ಲಿ ಅಚಂಚಲತೆಯನ್ನು ಸ್ಥಾಪಿಸುತ್ತದೆ. ಅದು ಹಾಗಿರುವಾಗ ಸಂಶಯ, ಅನಿಶ್ಚಿತತೆಗಳಿದ್ದರೆ, ಯಾವುದು

ಗುರಿಯತ್ತ ಕರೆದೊಯ್ಯುತ್ತದೆ ಎಂಬುದು, ಇಲ್ಲವೆ ಮನುಷ್ಯ ಅದನ್ನು ಎಂದಾದರೂ ತಲುಪುವನೋ ಎಂಬುದು, ಇಲ್ಲವೆ ತಲುಪಲು ಕೈಕೊಳ್ಳಬೇಕಾದುದು ಏನಾದರೂ ಇದೆಯೇ ಎಂಬುದು ಇಲ್ಲವೆ ಅದನ್ನು ಕೈಕೊಳ್ಳಲು ಮಾರ್ಗವಿದೆಯೇ ಎಂಬುದು ಇತ್ಯಾದಿ ಅವನಿಗೆ ತಿಳಿಯದೆ ಇದ್ದಾಗ ಅವನು ಕ್ಷೋಭೆಗೊಳಗಾಗುತ್ತಾನೆ ಮತ್ತು ಅದು ಸಾಮಾನ್ಯವಾಗಿ ಸತ್ತೆಯ ಸುತ್ತ ಒಂದು ಬಗೆಯ ಸುಂಟರ ಗಾಳಿಯನ್ನು ಸೃಷ್ಟಿಸುತ್ತದೆ, ಅದು ನಿಜವಾದ ವಿಷಯ ಸತ್ತೆಗೆ ದೊರಕದ ಹಾಗೆ ಮಾಡುತ್ತದೆ. ಅದರ ಬದಲಾಗಿ ಮನುಷ್ಯನಲ್ಲಿ ಅಚಂಚಲವಾದ ನಂಬಿಕೆಯಿದ್ದರೆ, ಅಭೀಪ್ಸೆ ಪಡುತ್ತಿರುವಾಗ ಉತ್ತರ ದೊರಕಿಸದ ಯಾವ ಅಭೀಪ್ಸೆ (ಸ್ವಾಭಾವಿಕವಾಗಿ ನಿಷ್ಕಪಟ ಅಭೀಪ್ಸೆ) ಇರುವುದಿಲ್ಲ ಎಂಬುದನ್ನು ಮನುಷ್ಯ ತಿಳಿದುಕೊಂಡಿದ್ದರೆ ಆಗ ಅವನು ಅಚಂಚಲನಾಗಿರುತ್ತಾನೆ. ಸಾಧ್ಯವಿದ್ದಷ್ಟು ಉತ್ಕಟ ಆಸಕ್ತಿಯಿಂದ ಮನುಷ್ಯ ಅಭೀಪ್ಸೆಪಡುತ್ತಾನೆ, ಆದರೆ ತಾನು ಕೇಳಿಕೊಂಡದ್ದು ಕೂಡಲೆ ಏಕೆ ದೊರಕುತ್ತಿಲ್ಲ ಎಂದು ಉದ್ರೇಕದಿಂದ ತಳಮಳಗೊಳ್ಳುತ್ತ ನಿಂತುಕೊಳ್ಳುವುದಿಲ್ಲ. ಹೇಗೆ ಕಾದುಕೊಂಡಿರಬೇಕು ಎಂಬುದನ್ನು ಅವನು ತಿಳಿದುಕೊಂಡಿರುತ್ತಾನೆ. ನಾನು ಒಂದೆಡೆ ಹೇಳಿದ್ದು ಹೀಗಿದೆ: "ಹೇಗೆ ಕಾದುಕೊಂಡಿರಬೇಕು ಎಂಬುದನ್ನು ತಿಳಿದುಕೊಂಡಿರುವುದು ಕಾಲವನ್ನು ತನ್ನ ಪರವಾಗಿ ಇರಿಸಿಕೊಂಡ ಹಾಗೆ." ಅದು ಬಹಳ ಸತ್ಯವಾದ ವಿಷಯ. ಕಾರಣ ಉದ್ರೇಕಕ್ಕೊಳಗಾದ ಮನುಷ್ಯ ತನ್ನ ಎಲ್ಲ ಕಾಲವನ್ನು, ಚೈತನ್ಯವನ್ನು, ಚಲನೆಗಳನ್ನು ಕಳೆದುಕೊಳ್ಳುತ್ತಾನೆ. ಸತ್ಯವಾದದ್ದು ಸಂಭವಿಸುತ್ತದೆ ಎಂಬ ನಂಬಿಕೆಯಿಂದ ಅಚಂಚಲತೆ, ಸ್ಥಿರತೆ ಹಾಗೂ ಶಾಂತಿ ಇವುಗಳಿಂದ ಕೂಡಿಕೊಂಡು ಅದು ಸಂಭವಿಸಲು ಅನುವು ಮಾಡಿಕೊಟ್ಟರೆ ಅದು ಬಹಳ ತೀವ್ರವಾಗಿ ಸಂಭವಿಸುವುದು. ಮತ್ತು ಆ ಶಾಂತಿಯ ಸ್ಥಿತಿಯಲ್ಲಿ ಎಲ್ಲವೂ ಹೆಚ್ಚು ಒಳ್ಳೆಯದಾಗುತ್ತ ಹೋಗುತ್ತವೆ.

**(5/395–96)** **– ಶ್ರೀಮಾತೆ**

*

## ಶ್ರೀಮಾತೆಯ ಮಹಾಕಾಳಿ ಮುಖ

ಶ್ರೀಮಾತೆಯ ನಾಲ್ಕು ಶ್ರೇಷ್ಠ ಮುಖಗಳು, ನೇತೃತ್ವ ವಹಿಸುವ ಅವಳ ನಾಲ್ಕು ದೈವೀ ಸಾಮರ್ಥ್ಯಗಳು ಮತ್ತು ದೈವೀ ವ್ಯಕ್ತಿವಿಶಿಷ್ಟತೆಗಳು, ವಿಶ್ವಕ್ಕೆ ಮಾರ್ಗದರ್ಶನ ನೀಡುವ ಕಾರ್ಯದಲ್ಲಿ ಹಾಗೂ ಪೃಥ್ವಿಯ ಮೇಲಿನ ಲೀಲೆಯಲ್ಲಿ ವ್ಯವಹರಿಸುವುದರಲ್ಲಿ ಮುಂಚೂಣಿಯಲ್ಲಿ ನಿಂತುಕೊಂಡಿವೆ, ... ಈ ನಾಲ್ಕು



ವ್ಯಕ್ತಿವಿಶಿಷ್ಟತೆಗಳಿಗೆ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾಸರಸ್ವತಿ ಎಂಬ ಶ್ರೇಷ್ಠ ಹೆಸರುಗಳನ್ನು ನಾವು ಕೊಡುತ್ತೇವೆ.

ಮಹಾಕಾಳಿಯ ಸ್ವಭಾವವು ಇನ್ನೊಂದು ಬಗೆಯದು, ಅವಳ ವಿಶೇಷ ಸಾಮರ್ಥ್ಯವು ವ್ಯಾಪಕತೆ ಅಲ್ಲ, ಆದರೆ ಅದು ಔನ್ನತ್ಯ, ವಿವೇಕವಲ್ಲ, ಆದರೆ ಶಕ್ತಿ, ಬಲ, ಸಹಿಸಲಸಾಧ್ಯವಾದ ತೀವ್ರತೆ, ಕಾರ್ಯಸಿದ್ಧಿಗಾಗಿ ಪ್ರಚಂಡ ಭಾವೋದ್ರೇಕ, ಪ್ರತಿಯೊಂದು ಅಡೆತಡೆಯನ್ನು ಕೊಚ್ಚಿಹಾಕುವ ದೈವೀ ಉಗ್ರ ಪ್ರತಾಪ ಇವೆಲ್ಲವುಗಳಿಂದ ಕೂಡಿದೆ. ಅವಳ ಸಕಲ ದೈವಿಕತೆ ಬಿರುಗಾಳಿಯಂತಹ ಭವ್ಯತೆಯಿಂದ ಕೂಡಿದ ಕಾರ್ಯಕ್ಕೆ ಪುಟಿದೇಳುತ್ತದೆ. ಶೀಘ್ರವಾಗಿ ಕೂಡಲೆ ಪರಿಣಾಮಕಾರಿಯಾಗುವ ವಿಧಾನಕ್ಕಾಗಿ ಅವಳಲ್ಲಿದ್ದಾಳೆ. ಆ ಸಾಮರ್ಥ್ಯದ ಎದುರು ಕೊಂಡೊಯ್ಯುವ ಪ್ರತಿಯೊಂದರ ಮೇಲೆ ಅವಳದು ರಭಸದ ನೇರ ಹೊಡೆತ, ಆಕ್ರಮಣ. ಅಸುರನಿಗೆ ಅವಳ ಮುಖ ಭಯಾನಕವಾದದ್ದು, ದೈವದ್ರೋಹಿಗಳ ಬಗ್ಗೆ ಅವಳ ಮನೋಭಾವ ಮರುಕವಿಲ್ಲದ್ದು, ಅಪಾಯಕಾರಕವಾದದ್ದು, ಏಕೆಂದರೆ ಅವಳು ರಣಾಂಗಣದಿಂದ ಎಂದೂ ಹಿಂದೆಗೆಯದ ಮನುಷ್ಯನಲ್ಲಿ ರಣಚಂಡಿ. ಬ್ರಹ್ಮಾಂಡಗಳ ಹಟಮಾರಿತನದಿಂದ ಅಜ್ಞಾನಿಯಾಗಿರುವುದು ಹಾಗೂ ಮಬ್ಬಾಗಿರುವುದು ಇದೆಲ್ಲದರ ವಿರುದ್ಧ ಅಪರಿಪೂರ್ಣತೆಯನ್ನು ಸಹಿಸಿಕೊಳ್ಳದ ಆಕೆಯ ವರ್ತನೆ ನಿರ್ದಾಕ್ಷಿಣ್ಯವಾದದ್ದಾಗಿರುತ್ತದೆ. ದ್ರೋಹ, ಮಿಥ್ಯಾಚಾರ, ಬದ್ಧದ್ವೇಷ ಇವುಗಳ ವಿರುದ್ಧ ಆಕೆಯ ರೋಷ ಕೂಡಲೆ ಕೆರಳಿ ರುದ್ರರೂಪ ತಾಳುವುದು, ಕೆಡುಕಿನ ಭಾವನೆಯು ಅವಳ ದೈವೀ ಪ್ರಕೋಪದಿಂದ ಜರ್ಜರಿತವಾಗುವುದು. ಭಗವತ್ ಕಾರ್ಯದಲ್ಲಿ ಉದಾಸೀನತೆ, ಉಪೇಕ್ಷೆ, ಆಲಸ್ಯಗಳನ್ನು ಅವಳು ಸಹಿಸಲಾರಳು. ಅಲ್ಲದೆ ಅವೇಳೆಯಲ್ಲಿ ಮಲಗುವವರನ್ನೂ, ಸುಮ್ಮನೆ ಸುತ್ತುವವರನ್ನೂ, ಅಗತ್ಯ ಕಂಡರೆ, ಕೂಡಲೆ ತೀವ್ರ ವೇದನೆಗೊಳಪಡಿಸಿ ಬಡಿದೆಬ್ಬಿಸುವಳು. ಮಹಾಕಾಳಿಯ ಕಾರ್ಯಗತಿಯಲ್ಲಿ ಪ್ರೇರಣೆಗಳು ತೀವ್ರಗತಿಯವು, ನೇರವಾದವುಗಳು, ಮುಚ್ಚುಮರೆಯಿಲ್ಲದವುಗಳು, ಚಲನೆಗಳು ಕಾದಿರಿಸಿಕೊಳ್ಳದಂತಹವು, ಪರಿಪೂರ್ಣವಾದವುಗಳು ಅಭೀಪ್ಸೆ ಜ್ವಾಲೆಯ ರೂಪದಲ್ಲಿ ಮೇಲೇರುವಂತಹದು. ಆಕೆಯ ಮನೋಧರ್ಮ ಅದಮ್ಯ, ದೃಷ್ಟಿ ಹಾಗೂ ಸಂಕಲ್ಪಗಳು ಗರುಡ ಪಕ್ಷಿಯ ಉಡ್ಡಾಣದ ಹಾಗೆ ಉಚ್ಚ ದರ್ಜೆಯದೂ, ದೂರಗಾಮಿಯಾದದ್ದೂ ಆಗಿದೆ. ಅವಳ ಪಾದಗಳು ಊರ್ಧ್ವ ಪಥದಲ್ಲಿ ತೀವ್ರಗತಿಯಿಂದ ಸಾಗುತ್ತವೆ. ಮತ್ತು ಅವಳ ಕೈಗಳು ಶಿಕ್ಷೆ ಕೊಡುವುದಕ್ಕೂ, ನೆರವು ನೀಡುವುದಕ್ಕೂ ಮುಂದೆ ಚಾಚಿವೆ, ಏಕೆಂದರೆ ಅವಳೂ ಕೂಡ ಮಾತೆಯೆ, ಅವಳ

ಪ್ರೇಮ ಕ್ರೋಧದಷ್ಟೇ ಗಾಢ, ಅವಳಲ್ಲಿ ಆಳವಾದ, ಭಾವಭರಿತ ಕಾರುಣ್ಯವಿದೆ. ತನ್ನ ಶಕ್ತಿಸಮೇತವಾಗಿ ಅವಳು ಮಧ್ಯಸ್ಥಿಕೆ ವಹಿಸಲು ಅನುವು ಮಾಡಿಕೊಟ್ಟರೆ, ಅನ್ವೇಷಕನ ಪ್ರಗತಿಯನ್ನು ತಡೆಗಟ್ಟುವ ವಿಘ್ನಗಳು ಅಥವಾ ಅವನ ಮೇಲೆರಗುವ ವೈರಿಗಳು ನಿಮಿಷ ಮಾತ್ರದಲ್ಲಿ, ಅಸಾಂದ್ರ ವಸ್ತುಗಳ ಹಾಗೆ ಪುಡಿಪುಡಿಯಾಗಿ ಹೋಗುವವು. ಅವಳ ಕೋಪ ವಿರೋಧಿಗಳಿಗೆ ಭಯವನ್ನುಂಟು ಮಾಡುವಂತಹದು, ಅವಳ ಆವೇಗಪೂರ್ಣ ಒತ್ತಡ ದುರ್ಬಲರಿಗೆ, ಪುಕ್ಕರಿಗೆ ನೋವನ್ನುಂಟು ಮಾಡುವಂತಹದು ಆಗಿದ್ದರೂ ಮಹಾಮಹಿಮರು, ವೀರರು, ಕುಲೀನರು ಇವರೆಲ್ಲರಿಗೆ ಅವಳು ಅತಿ ಪ್ರಿಯಳು, ಪೂಜಾರ್ಹಳು. ಅವಳು ಕೊಟ್ಟ ಹೊಡೆತಗಳು ಅವರ ಭೌತಿಕ ಆಧಾರದಲ್ಲಿ ವಿದ್ರೋಹಕರವಾದದ್ದನ್ನೆಲ್ಲ ಸಾಮರ್ಥ್ಯವನ್ನಾಗಿ, ಪರಿಪೂರ್ಣ ಸತ್ಯವನ್ನಾಗಿ ಮಾರ್ಪಡಿಸುವವು, ವಕ್ರವೂ ವಿಕೃತವೂ ಆಗಿರುವುದನ್ನೆಲ್ಲ ಅವಳ ಸುತ್ತಿಗೆ ಪೆಟ್ಟುಗಳು ನೇರವಾಗುವಂತೆ ತಿದ್ದುವವು, ಅಪವಿತ್ರ ಹಾಗೂ ಕುಂದುಕೊರತೆಗಳಿಂದ ಕೂಡಿದ್ದನ್ನು ಹೊರದೂಡುವವು ಎಂದು ಅವರು ಭಾವಿಸುತ್ತಾರೆ. ಅವಳಿಲ್ಲದಿದ್ದರೆ ಒಂದು ದಿನದಲ್ಲಾಗುವ ಕಾರ್ಯಕ್ಕೆ ನೂರಾರು ವರ್ಷಗಳು ಬೇಕಾಗಬಹುದಾಗಿತ್ತು. ಅವಳಿಲ್ಲದೆ ಆನಂದ ವಿಸ್ತರಿಸಿಕೊಂಡದ್ದು ಮತ್ತು ಗಂಭೀರವಾದದ್ದು ಇಲ್ಲವೆ ಮೃದು ಮತ್ತು ಮಧುರ, ಸುಂದರ ಲಕ್ಷಣಗಳನ್ನು ಹೊಂದಿದ್ದು ಮಾತ್ರ ಆಗಬಹುದಾಗಿತ್ತು, ಆದರೆ ಅತ್ಯಂತ ಪರಿಪೂರ್ಣ ತೀವ್ರತೆಗಳ ಜಾಜ್ವಲ್ಯಮಾನ ಸಂತೋಷಾನುಭವ ಇರುತ್ತಿರಲಿಲ್ಲ. ಜ್ಞಾನಕ್ಕೆ ಅವಳು ಜಯ ದೊರಕಿಸುವ ಬಲ ಕೊಡುವಳು, ಸೌಂದರ್ಯ ಹಾಗೂ ಸಾಮರಸ್ಯಗಳಿಗೆ ಉನ್ನತ ಹಾಗೂ ಮೇಲಕ್ಕೇರುವ ಚಾಲನೆ ತಂದುಕೊಡುವಳು. ಪರಿಪೂರ್ಣತೆಯನ್ನು ಬೆಂಬತ್ತಿರುವ, ನಿಧಾನ ಹಾಗೂ ಕಠಿಣ ಶ್ರಮಸಾಧನೆಗಾಗಿ ಇರುವ ಸಾಮರ್ಥ್ಯ ಬಹುಪಾಲು ಹೆಚ್ಚಾಗುವಂತೆ ಉತ್ತೇಜನ ನೀಡುವಳು. ಪರಮೋಚ್ಚ ದಿವ್ಯಾನಂದಗಳು, ಅತ್ಯುಚ್ಚ ಔನ್ನತ್ಯಗಳು, ಅತಿ ಉದಾರ ಗುರಿಗಳು, ಹೆಚ್ಚು ಭವ್ಯವಾದ ನೀಳ ನೋಟಗಳು ಇವುಗಳಿಗೆ ಕಡಿಮೆಯಾದ ಯಾವುದೂ ಅವಳಿಗೆ ತೃಪ್ತಿ ತಂದುಕೊಡಲಾರದು. ಆದ್ದರಿಂದ ವಿಜಯ ತಂದುಕೊಡುವ ಭಗವಂತನ ಶಕ್ತಿ ಅವಳೊಂದಿಗಿದೆ. ಭವ್ಯ ಸಿದ್ಧಿಗಳನ್ನು ಇನ್ನೆಂದೋ ಸಾಧಿಸುವುದರ ಬದಲಾಗಿ ಇಂದೇ ಸಾಧಿಸಬೇಕಾದರೆ ಅದು ಅವಳ ಪ್ರಜ್ವಲಿತ, ಭಾವೋನ್ಮತ್ತ, ಶೀಘ್ರಗತಿಗಳಿಂದ ಮಾತ್ರ ಸಾಧ್ಯ.

**(32/17–20)** **– ಶ್ರೀ ಅರವಿಂದರು**

*



## ಒಂದು ಕ್ಯಾಲ್ಡಿಯನ್ ಪುರಾಣ ಕತೆ

ಅತಿ ಪ್ರಾಚೀನ ಕಾಲದಲ್ಲಿ, ಈಗ ಅರೇಬಿಯಾ ಎಂಬ ಹೆಸರಿರುವ ಒಣ ಭೂಪ್ರದೇಶದಲ್ಲಿ ದೈವೀ ಸತ್ತೆಯಿರುವ ಸಂತನೊಬ್ಬ ಅವತಾರ ತಾಳಿದ್ದ. ಪೃಥ್ವಿಯ ಮೇಲೆ ಅವನ ಉದ್ದೇಶ ಜನರಲ್ಲಿ ಪರಮೋಚ್ಚ ಪ್ರೇಮದ ಬಗ್ಗೆ ಅರಿವನ್ನುಂಟು ಮಾಡುವುದಾಗಿತ್ತು. ನಿರೀಕ್ಷಿಸಬಹುದಾದಂತೆ ಅಲ್ಲಿಯ ಜನರು ಅವನನ್ನು ಪೀಡಿಸಿದರು, ಅಪಾರ್ಥಮಾಡಿಕೊಂಡರು, ಅವನ ಹೇಳಿಕೆ ಕುರಿತು ಸಂಶಯ ಪಟ್ಟರು, ಅವನನ್ನು ಸಾಯಿಸಿಬಿಡಲು ಬೆನ್ನಟ್ಟಿಹೋದರು. ಮಾರಕವಾಗಿ ಗಾಯ–ಗೊಂಡ ಅವನು ಏಕಾಂತವಿರುವಲ್ಲಿ ಶಾಂತರೀತಿಯಿಂದ ಸಾವನ್ನಪ್ಪಬೇಕೆಂದೂ, ಅದರಿಂದಾಗಿ ತನ್ನ ಕಾರ್ಯ ಸಿದ್ಧಿಸಿಕೊಳ್ಳುವುದೆಂದೂ ಭಾವಿಸಿ ಬೆನ್ನಟ್ಟಿ ಬರುತ್ತಿದ್ದ ಜನರಿಂದ ದೂರ ಓಡಿಹೋದನು. ಆ ವಿಶಾಲ ಮರುಭೂಮಿಯಲ್ಲಿ ಚಿಕ್ಕ ದಾಳಿಂಬೆ ಪೊದೆ ಅವನಿಗೆ ಕಾಣಿಸಿತು, ಅದರ ಕೆಳಭಾಗದಲ್ಲಿದ್ದ ಟೊಂಗೆಗಳ ಕೆಳಗೆ ಅವನು ನುಸುಳಿದ, ಅಲ್ಲಿ ಅವನು ಶಾಂತರೀತಿಯಿಂದ ದೇಹತ್ಯಾಗ ಮಾಡುವವನಿದ್ದ. ಕೂಡಲೆ ಆ ಪೊದೆ, ಪವಾಡಸದೃಶ ರೀತಿಯಲ್ಲಿ, ಹೊರಗೆ ಹರಡಿಕೊಂಡಿತು, ಹೆಚ್ಚಿನ ಎತ್ತರಕ್ಕೆ ಭವ್ಯವಾಗಿ ಬೆಳೆಯಿತು, ಅದು ಆಳವುಳ್ಳದ್ದೂ, ಒತ್ತಾಗಿದ್ದೂ ಆಯಿತು. ಅದರಿಂದಾಗಿ ಸಂತನನ್ನು ಬೆನ್ನಟ್ಟಿ ಬಂದವರು ಆ ಪೊದೆಯ ಬದಿಯಿಂದ ಸಾಗಿ ಹೋಗುವಾಗ ಸಂತ ಅಲ್ಲಿ ಅಡಗಿಕೊಂಡಿರಬಹುದೆಂಬ ಸಂಶಯ ಅವರಿಗೆ ಬರಲಿಲ್ಲ, ಅವರು ತಮ್ಮ ದಾರಿ ಹಿಡಿದು ಹೋದರು.

ಅದು ಹಾಗಿರುವಾಗ ಸಂತನ ಪವಿತ್ರ ರಕ್ತ ಹನಿ ಹನಿಯಾಗಿ ಕೆಳಗೆ ಬೀಳುತ್ತ ಅಲ್ಲಿದ್ದ ನೆಲವನ್ನು ಫಲವತ್ತಾಗಿಸಿತು. ಆ ಪೊದೆ ಅದ್ಭುತ ಹೂವುಗಳಿಂದ ಆವರಿಸಿಕೊಂಡಿತು, ಆ ಹೂವುಗಳು ಕಡುಗೆಂಪು ಬಣ್ಣದವು, ಭವ್ಯವಾದವುಗಳು, ಅಸಂಖ್ಯಾತ ರಕ್ತದ ಹನಿಗಳ ಸಂಕೇತದ ರೂಪದಲ್ಲಿ ಅನೇಕ ದಳಗಳನ್ನು ಹೊಂದಿರುತ್ತವೆ. ಈ ಹೂವುಗಳೇ ದೈವೀ ಪ್ರೇಮವನ್ನು ನಮಗಾಗಿ ಅಭಿವ್ಯಕ್ತ–ಪಡಿಸುತ್ತವೆ ಹಾಗೂ ತಮ್ಮಲ್ಲಿ ಒಳಗೊಂಡಿವೆ.

*

**ಪ್ರಶ್ನೆ :** *ಮಧುರ ಮಾತೆಯವರೆ, ನೀವು ಬರೆದ ಕ್ಯಾಲ್ಡಿಯನ್ ಪುರಾಣ ಕತೆಗೂ ಕಾಳಿಪೂಜೆಗೂ ಏನಾದರೂ ಸಂಬಂಧವಿದೆಯೆ?*

**ಶ್ರೀಮಾತೆ :** ಹೌದು ಮಗು, ಏಕೆಂದರೆ ಕಾಳಿಪೂಜೆಯ ದಿನ ನಾನು ಯಾವಾಗಲೂ ದೈವೀ ಪ್ರೇಮದ ಹೂವುಗಳನ್ನು ವಿತರಿಸುತ್ತೇನೆ. ಏಕೆಂದರೆ ದೈವೀ ಮಹಾಶಕ್ತಿಯ

ಎಲ್ಲ ಮುಖಗಳಲ್ಲಿ ಕಾಳೀದೇವಿ ಅತ್ಯಂತ ಪ್ರೇಮಮಯಿ, ಅವಳದು ಅತ್ಯಂತ ಕ್ರಿಯಾಶೀಲ ಮತ್ತು ಸಾಮರ್ಥ್ಯಪೂರ್ಣ ದೈವೀ ಪ್ರೇಮ.

**(7/373, 365)** **– ಶ್ರೀಮಾತೆ**

*

## ದುರ್ಗಾ

ಎಲ್ಲ ಸೃಷ್ಟಿಗೆ ರೂಪಗೊಂಡದ್ದು ಹಾಗೂ ರೂಪರಹಿತವಾದದ್ದು ಎಂಬ ಎರಡು ಬದಿಗಳಿವೆ, ದೇವತೆಗಳೂ ಕೂಡ ರೂಪರಹಿತರಾಗಿದ್ದಾರೆ, ಆದಾಗ್ಯೂ ಅವರಿಗೂ ರೂಪಗಳಿವೆ, ಆದರೆ ದೇವ ಪ್ರಮುಖರಾದವರು ಅನೇಕ ರೂಪಗಳನ್ನು ಧಾರಣಮಾಡಬಲ್ಲರು ಇಲ್ಲಿ ಮಹೇಶ್ವರಿ, ಅಲ್ಲಿ ಪಲ್ಲಾಸ ಅಥೇನ್ (Pallas Athene), ಮಹೇಶ್ವರಿಗೆ ಅವಳ ಕಡಿಮೆ ಪ್ರಮಾಣದ ಪ್ರಕಟಣೆಗಳಲ್ಲಿ ಅನೇಕ ರೂಪಗಳಿವೆ: ದುರ್ಗಾ, ಉಮಾ, ಪಾರ್ವತಿ, ಚಂಡಿ ಇತ್ಯಾದಿ.

*

ಮಹೇಶ್ವರಿ ಹಾಗೂ ಮಹಾಕಾಳಿ ಇವರ ಗುಣಲಕ್ಷಣಗಳಲ್ಲಿ ಕೆಲವೊಂದು ದುರ್ಗೆಯಲ್ಲಿ ಕೂಡಿಕೊಂಡಿರುತ್ತವೆ.

*

ಶ್ರೀಮಾತೆಯವರಲ್ಲಿ ದುರ್ಗಾ ಸಂರಕ್ಷಣೆಯ ಸಾಮರ್ಥ್ಯವಾಗಿದ್ದಾಳೆ.

**(37/67–70)** **– ಶ್ರೀ ಅರವಿಂದರು**

*

ದುರ್ಗಾದೇವಿಯ ಕತೆ ನಿಮಗೆ ಗೊತ್ತಿದೆಯಲ್ಲವೆ? ಪ್ರತಿವರ್ಷ ದುರ್ಗಾ ತನಗೆದುರಾಗುವ ಅಸುರನನ್ನು ನಾಶಮಾಡಬೇಕು. ಮತ್ತು ಅದನ್ನು ಯಾವಾಗಲೂ ಮತ್ತೆ ಪ್ರಾರಂಭಿಸಬೇಕಾದ ಒತ್ತಾಯಕ್ಕೊಳಗಾಗಿರುತ್ತಾಳೆ. ದೈತ್ಯರಿಗೆ ಕೊಡಲಾದ ಆಳಿಕೆ ಕೊನೆಗಾಣುವವರೆಗೆ ಈ ರೀತಿ ನಡೆದು ಹೋಗುತ್ತದೆ. ಅವರನ್ನು ಈ ಲೋಕದಿಂದ ಓಡಿಸಿದ ನಂತರ ಅದು ಈ ರೀತಿಯದಾಗಿ ಉಳಿದುಕೊಳ್ಳುವುದಿಲ್ಲ. ಆದರೆ ಅಲ್ಲಿಯವರೆಗೆ ಎಂದರೆ ಅಭೀಪ್ಸೆಯನ್ನು ಗಾಢವಾಗಿಸುವುದಕ್ಕಾಗಿ, ಪ್ರಜ್ಞೆಯನ್ನು ನಿರ್ಮಲಗೊಳಿಸುವುದಕ್ಕಾಗಿ, ಜನರ ನಿಷ್ಕಾಪಟ್ಯವನ್ನು ಒರೆಗೆ ಹಚ್ಚುವುದಕ್ಕಾಗಿ ಅವರ ಆವಶ್ಯಕತೆ ಇರುವವರೆಗೆ ಅವರಿರುತ್ತಾರೆ. ಪರೀಕ್ಷೆಯ ಆವಶ್ಯಕತೆ ಇಲ್ಲದಂತಾದಾಗ, ನಿಷ್ಕಾಪಟ್ಯ ಪರಿಶುದ್ಧವಾದ ಮತ್ತು ಸ್ವ–ಅಸ್ತಿತ್ವದಲ್ಲಿದ್ದ



ದಿನದಂದು ಅವರು ಮಾಯವಾಗುವರು. ದುರ್ಗಾ ಪ್ರತಿವರ್ಷ ತನ್ನ ಸಮರವನ್ನು ಮತ್ತೆ ಪ್ರಾರಂಭಿಸುವ ಆವಶ್ಯಕತೆ ಇರುವುದಿಲ್ಲ.

**(5/96–97)** **– ಶ್ರೀಮಾತೆ**

*

## ಅತ್ಯಂತ ಒಳ್ಳೆಯ ಮನೋಭಾವ

### ಅಗಸ್ಟ 2, 1939 ಶ್ರೀಮಾತೆಯವರ ಪ್ರಾರ್ಥನೆಗಳು ಹಾಗೂ ಧ್ಯಾನಗಳು

ಪ್ರಾರಂಭವಾಗುತ್ತಿರುವ ತಿಂಗಳಿನ ಮೇಲೆ, ಈ ದಿನ ಬೆಳಿಗ್ಗೆ ನಾನು ಕಣ್ಣಾಡಿಸುತ್ತಿದ್ದಾಗ ಮತ್ತು ಭಗವಂತನಿಗೆ ಹೆಚ್ಚು ಒಳ್ಳೆಯ ರೀತಿಯಲ್ಲಿ ಸೇವೆಯನ್ನು ಹೇಗೆ ಸಲ್ಲಿಸಬೇಕು ಎಂದು ಯೋಚಿಸುತ್ತಿದ್ದಾಗ, ಗೊಣಗಾಟದಂತೆ ಕೇಳಿ ಬಂದ ಚಿಕ್ಕ ಧ್ವನಿ ಹೇಳಿದ್ದು ಹೀಗಿದೆ: "ಎಲ್ಲ ಬಾಹ್ಯ ಪರಿಸ್ಥಿತಿಗಳು ದೊಡ್ಡವೇನಲ್ಲ ಎಂಬುದನ್ನು ನೋಡು. ನಿನ್ನದೇ ಸತ್ಯದ ಕಲ್ಪನೆಯನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಅಷ್ಟೊಂದು ಹೆಣಗುವುದೇಕೆ, ಮಿತಿ ಮೀರಿ ದುಡಿಯುವುದೇಕೆ? ಹೆಚ್ಚು ಸೇವಾ ಮನೋವೃತ್ತಿಯುಳ್ಳವಳು ಹಾಗೂ ವಿಶ್ವಾಸವುಳ್ಳವಳೂ ಆಗು. ಕೇವಲ ಒಂದು ಕರ್ತವ್ಯವೆಂದರೆ ತನ್ನನ್ನು ಯಾವುದೂ ಕ್ಷೋಭೆಗೊಳಿಸದಂತೆ ಮಾಡಿಕೊಳ್ಳುವು–ದಾಗಿದೆ. ಸರಿಯಾದ ಕಾರ್ಯವನ್ನು ಕೈಕೊಳ್ಳುವುದನ್ನು ಕುರಿತು ಮನುಷ್ಯ ತನ್ನನ್ನು ಪೀಡೆಗೆ ಒಳಪಡಿಸುವುದು ಕೆಟ್ಟ ಸಂಕಲ್ಪ ಉಂಟುಮಾಡುವಷ್ಟು ಹಾನಿಯನ್ನುಂಟು ಮಾಡುತ್ತದೆ. ಕೇವಲ ಆಳವಾದ ನೀರಿನಲ್ಲಿರುವ ಸ್ಥಿರತೆಯಂತಹದರಿಂದ ನಿಜವಾದ ಸೇವೆಯ ಸಾಧ್ಯತೆಯನ್ನು ಕಂಡುಕೊಳ್ಳಬಹುದು."

ಮತ್ತು ಈ ಉತ್ತರ ಎಷ್ಟೊಂದು ಪ್ರಕಾಶಮಯ ಹಾಗೂ ಪರಿಶುದ್ಧ–ವಾಗಿತ್ತೆಂದರೆ ಅದು ತನ್ನಲ್ಲಿ ಗಮನಾರ್ಹ ನೈಜತೆಯನ್ನು ಕೊಂಡೊಯ್ದಿತ್ತು, ಅದು ವರ್ಣಿಸಿದ ಸ್ಥಿತಿಯನ್ನು ಯಾವ ತೊಂದರೆ ಇಲ್ಲದೆ ನಿವೇದಿಸಲಾಯಿತು. ಸ್ಥಿರ ಹಾಗೂ ಆಳವಾದ ನೀರಿನಲ್ಲಿ ನಾನು ತೇಲುತ್ತಿದ್ದಂತೆ ಭಾಸವಾಯಿತು. ನನಗೆ ಅರ್ಥವಾಯಿತು ಅತ್ಯಂತ ಒಳ್ಳೆಯ ಮನೋಭಾವ ಹೇಗಿರಬೇಕು ಎಂಬುದನ್ನು ನಾನು ಸ್ಪಷ್ಟವಾಗಿ ನೋಡಿದೆ. ಮತ್ತು ಈಗ ಓ ಘನತೆವೆತ್ತ ದೈವೀ ಪ್ರಭುವಾದ, ಪರಮೋಚ್ಚ ಗುರುವಾದ ನೀನು ನನಗೆ ಈ ಸ್ಥಿತಿಯನ್ನು ಸತತ ಉಳಿಸಿಕೊಳ್ಳುವುದಕ್ಕೆ ಬಲವನ್ನು ಮತ್ತು ಸ್ಪಷ್ಟ ದೃಷ್ಟಿಯನ್ನು ಕೊಡು ಎಂಬುದನ್ನು ಮಾತ್ರ ಕೇಳಬೇಕು.

"ಮಗು ನಿನ್ನನ್ನು ಪೀಡೆಗೊಳಪಡಿಸಬೇಡ, ನಿಶ್ಚಲ ನೀರವತೆ, ಶಾಂತಿ, ಶಾಂತಿ."

**(1/26)** **– ಶ್ರೀಮಾತೆ**

*

## "ನಾನು ನಿನ್ನವನಾಗಲು ಬಯಸುತ್ತೇನೆ"

ನಿಮ್ಮ ಪ್ರಜ್ಞೆಯ ಆಳಾತಿ ಆಳಗಳಲ್ಲಿ ಚೈತ್ಯಸತ್ತೆಯಿದೆ, ಅದು ನಿಮ್ಮೊಳಗಿರುವ ಭಗವಂತನ ದೇವಾಲಯ. ಈ ಕೇಂದ್ರದ ಸುತ್ತ ಈ ಎಲ್ಲ ಬೇರೆ ಬೇರೆಯಾದ ಭಾಗಗಳ, ಪರಸ್ಪರ ವಿರುದ್ಧ ಚಲನೆಗಳ ಏಕತೆಯುಂಟಾಗಬೇಕು. ಒಮ್ಮೆ ಈ ಚೈತ್ಯಸತ್ತೆಯ ಬಗ್ಗೆ ಹಾಗೂ ಅದರ ಅಭೀಪ್ಸೆಯ ಬಗ್ಗೆ ಅರಿವುಳ್ಳವರಾದ ನಂತರ ಈ ಎಲ್ಲ ಸಂಶಯಗಳನ್ನು ಹಾಗೂ ತೊಂದರೆಗಳನ್ನು ನಾಶಮಾಡಬಹುದು ಅದಕ್ಕೆ ಹೆಚ್ಚುಕಡಿಮೆ ಸಮಯ ಬೇಕಾಗುತ್ತದೆ, ಆದರೆ ಕೊನೆಗೆ ನೀವು ಜಯ ಗಳಿಸುವಿರಿ. "ನಾನು ನಿನ್ನವನಾಗಬಯಸುತ್ತೇನೆ" ಎಂದು ಒಮ್ಮೆ ಭಗವಂತನತ್ತ ಹೊರಳಿದಾಗ ಮತ್ತು ಭಗವಂತ "ಆಗಲಿ" ಎಂದು ಹೇಳಿದಾಗ ಇಡೀ ಜಗತ್ತು ಅದರಿಂದ ನಿಮ್ಮನ್ನು ದೂರವಿರಿಸಲಾರದು. ಕೇಂದ್ರಸತ್ತೆ ತನ್ನ ಶರಣಾಗತಿಯನ್ನು ಮಾಡಿಕೊಂಡ ನಂತರ ಮುಖ್ಯ ತೊಂದರೆ ಮಾಯವಾಗಿರುತ್ತದೆ, ಬಾಹ್ಯ ಸತ್ತೆ ಕೇವಲ ತೊಗಟೆ (crust) ಇದ್ದ ಹಾಗಿರುತ್ತದೆ. ಸಾಮಾನ್ಯ ಜನರಲ್ಲಿ ಆ ತೊಗಟೆ ಎಷ್ಟೊಂದು ಬಿರುಸಾದದ್ದು ಹಾಗೂ ದಪ್ಪವಾದದ್ದು ಆಗಿರುತ್ತದೆಂದರೆ ಅವರು ತಮ್ಮೊಳಗಿರುವ ಭಗವಂತನ ಬಗ್ಗೆ ಅರಿವುಳ್ಳವರಾಗಿರುವುದಿಲ್ಲ. ಒಮ್ಮೆ, ಒಂದು ಕ್ಷಣ ಮಾತ್ರಕ್ಕಾಗಲಿ, ಆಂತರಿಕ ಸತ್ತೆ "ನಾನಿಲ್ಲಿದ್ದೇನೆ, ನಾನು ನಿನ್ನವನು" ಎಂದು ಹೇಳಿದ್ದರೆ, ಆಗ (ಆಂತರಿಕ ಹಾಗೂ ಬಾಹ್ಯ ಸತ್ತೆಗಳ ನಡುವೆ) ಒಂದು ಸೇತುವೆ ನಿರ್ಮಾಣಗೊಂಡ ಹಾಗಿರುತ್ತದೆ ಮತ್ತು ಸ್ವಲ್ಪ ಸ್ವಲ್ಪವಾಗಿ ಆ ತೊಗಟೆ ತೆಳುವಾಗುತ್ತ ಹೋಗುತ್ತದೆ ಮತ್ತು ಆಂತರಿಕ ಹಾಗೂ ಬಾಹ್ಯ ಸತ್ತೆಗಳ ನಡುವೆ ಸಂಪರ್ಕವುಂಟಾಗುತ್ತದೆ ಹಾಗೂ ಅವು ಏಕವಾಗುತ್ತವೆ.

**(3/7)** **– ಶ್ರೀಮಾತೆ**

*

## ಭೌತಿಕ ದೇಹ ಹಾಗೂ ಜೀವನಕ್ಕೆ ಮೂಲ ಕಾರಣ

ಈ ಬಗೆಯ ಕರ್ಮ, ದೈವೀ ಕೇಂದ್ರದ ಸುತ್ತ, ಸತ್ತೆ ಸಾಮರಸ್ಯದಿಂದ ಹಾಗೂ ಸಂಘಟಿತಗೊಂಡು ಇರುವಂತೆ ಮಾಡುವುದು ಇದೆಲ್ಲವನ್ನು ಪೃಥ್ವಿಯ ಮೇಲಿನ ಭೌತಿಕ ದೇಹದಲ್ಲಿ ಮಾಡಬಹುದು. ಅದು ಭೌತಿಕ ಜೀವನಕ್ಕೆ ಅವಶ್ಯವಾದದ್ದು ಮತ್ತು ಮೂಲ ಕಾರಣ. ಏಕೆಂದರೆ ನೀವು ಭೌತಿಕ ದೇಹದಲ್ಲಿ ಇರದೆ ಹೋದ ಕ್ಷಣದಿಂದ ನಿಮಗೆ ಅದನ್ನು ಮಾಡಲಾಗುವುದಿಲ್ಲ.



ಮತ್ತು ಇನ್ನೂ ಹೆಚ್ಚು ಅಸಾಧಾರಣವಾದ ಸಂಗತಿ ಎಂದರೆ, ಕೇವಲ ಮಾನವ ಸತ್ತೆಗಳಷ್ಟೇ ಅದನ್ನು ಕೈಕೊಳ್ಳಬಹುದು, ಏಕೆಂದರೆ ಮನುಷ್ಯರು ತಮ್ಮ ಹೃದಯ ಕೇಂದ್ರದಲ್ಲಿರುವ ಚೈತ್ಯ ಸತ್ತೆಯಲ್ಲಿ ದೈವೀ ಸಾನ್ನಿಧ್ಯವನ್ನು ಹೊಂದಿದ್ದಾರೆ.

ಮತ್ತು ಆದಾಗ್ಯೂ ಮಾನವ ಸತ್ತೆಗಳು, ಏಕೆಂಬುದನ್ನು ತಿಳಿದುಕೊಳ್ಳದೆ, ಭೌತಿಕ ದೇಹದಲ್ಲಿರಲು ಬರುತ್ತಾರೆ, ಅವರಲ್ಲಿ ಹಲವಾರು ಸತ್ತೆಗಳು ಜೀವನವನ್ನು ಏಕೆ ನಡೆಸುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳದೆ ಜೀವಿಸುತ್ತಾರೆ, ದೇಹವನ್ನು ಏಕೆ ತೊರೆದು ಹೋಗುತ್ತಿದ್ದೇವೆ ಎಂಬುದನ್ನು ತಿಳಿದುಕೊಳ್ಳದೆ ದೇಹ ಬಿಟ್ಟು ಹೋಗುತ್ತಾರೆ. ಇಂತಹದನ್ನು ಅನಿರ್ದಿಷ್ಟ ಕಾಲದ ವರೆಗೆ ಎಂದರೆ ಯಾರೋ ಒಬ್ಬರು ಬಂದು "ಕಾಳಜಿಯಿಂದಿರಿ, ಜೀವನಕ್ಕೆ ಒಂದು ಉದ್ದೇಶವಿದೆ, ನೀವು ಆ ಉದ್ದೇಶ ಸಾಧನೆಯ ಕಾರ್ಯಕ್ಕಾಗಿ ಬಂದಿರುವಿರಿ, ಈ ಸದವಕಾಶವನ್ನು ಕಳೆದುಕೊಳ್ಳಬೇಡಿರಿ" ಎಂದು ಹೇಳುವವರೆಗೆ ದೇಹ ಧರಿಸುವ, ತ್ಯಾಗ ಮಾಡುವ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ.

ಎಷ್ಟೊಂದು ವರ್ಷಗಳ ಕಾಲ ವ್ಯರ್ಥವಾಗಿ ಹೋಗುತ್ತದೆ.

**(8/175)** **– ಶ್ರೀಮಾತೆ**

*

## ಭಗವಂತನಲ್ಲದೆ ಬೇರೇನೂ ಇಲ್ಲ

ಸೃಷ್ಟಿಕರ್ತನಾದವನು ದೇವ, – ಸೃಷ್ಟಿಯಾದದ್ದು ಒಂದೆಡೆ ಮತ್ತು ದೇವ ಇನ್ನೊಂದೆಡೆ ಇರುತ್ತಾರೆ ಎಂಬ ಕ್ರಿಶ್ಚಿಯನ್‌ರ ವಿಚಾರವನ್ನು ಜನರು ತಮ್ಮ ಮನಸ್ಸಿನಲ್ಲಿ ತುಂಬಿಕೊಂಡಿರುತ್ತಾರೆ. ಅದನ್ನು ಕುರಿತು ನೀವು ಯೋಚಿಸಿದಾಗ ಅದನ್ನು ತಿರಸ್ಕರಿಸುತ್ತೀರಿ, ಆದರೆ ಅದು ಸಂವೇದನೆಗಳಲ್ಲಿ ಹಾಗೂ ಭಾವನೆಗಳಲ್ಲಿ ಒಳನುಗ್ಗಿದೆ; ಎಷ್ಟೊಂದು ಸ್ವಯಂಪ್ರೇರಿತವಾಗಿ, ಸಹಜ ಪ್ರವೃತ್ತಿಯಿಂದ, ಬಹುಮಟ್ಟಿಗೆ ಅವಚೇತನದಿಂದ ಅದು ಆಗಿದೆಯೆಂದರೆ ನೀವು ಅತ್ಯಂತ ಸುಂದರವಾದುದಕ್ಕೆ, ಅತ್ಯಂತ ಒಳ್ಳೆಯದಾದುದಕ್ಕೆ ಸಿದ್ಧಿಸಿಕೊಳ್ಳಬೇಕಾದುದೆಲ್ಲದಕ್ಕೆ ದೇವ ಕಾರಣನೆಂದು ಹೇಳುತ್ತೀರಿ. ಸ್ವಾಭಾವಿಕವಾಗಿ ಪ್ರತಿಯೊಬ್ಬನೂ ತನ್ನ ಪ್ರಜ್ಞೆಗನುಗುಣವಾಗಿ ತನ್ನ ದೇವನಲ್ಲಿರುವುದನ್ನು ಬದಲು ಮಾಡುತ್ತಾನೆ, ಆದರೆ

ಅದು ಅವನು ಯಾವಾಗಲೂ ಒಳ್ಳೆಯದೆಂದು ಪರಿಗಣಿಸಿದ್ದಾಗಿರುತ್ತದೆ. ಮತ್ತು ಆ ಕಾರಣದಿಂದಾಗಿಯೇ ಸಹಜವಾಗಿ, ಸ್ವಯಂಪ್ರೇರಿತರಾಗಿ, ಅವಚೇತನದ ಮೂಲಕ ನೀವು ಇಷ್ಟಪಡದ, ಒಪ್ಪಿಕೊಳ್ಳಲಾರದ, ಒಳ್ಳೆಯದಲ್ಲವೆನಿಸುವ ವಿಷಯಗಳ ವಿಚಾರವಿರುವ ದೇವನನ್ನು ಕುರಿತು ಆಘಾತಕ್ಕೊಳಗಾಗುತ್ತೀರಿ.

ಉದ್ದೇಶಪೂರ್ವಕವಾಗಿ ಅದನ್ನು ನಾನು ಹೆಚ್ಚಾಗಿ ಬಾಲಿಶ ರೂಪದಲ್ಲಿ ಹೇಳಿದ್ದೇನೆ, ಅದರಿಂದಾಗಿ ನೀವು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳು–ವಂತಾಗುವುದು, ಆದರೆ ಅದು ಹಾಗಿದೆ, – ನನಗೆ ಅದರ ಬಗ್ಗೆ ನಿಶ್ಚಿತತೆ ಇದೆ, ಏಕೆಂದರೆ ಅದನ್ನು ನಾನೇ ಬಹಳ ಕಾಲದವರೆಗೆ ಅವಲೋಕನ ಮಾಡಿದ್ದೇನೆ, ಅವಚೇತನದ ಮೂಲಕ ಬಾಲ್ಯ ರೂಪುಗೊಳ್ಳುವಿಕೆ, ಪರಿಸರ, ಶಿಕ್ಷಣ ಇವೆಲ್ಲ ಅದಕ್ಕೆ ಕಾರಣವಾಗಿರುತ್ತವೆ. ಈ ದೇಹದಲ್ಲಿ ದೈವಿಕವಾಗಿ ಏಕೈಕವಾಗಿರುವುದರ ಪ್ರಜ್ಞೆಯನ್ನು ಒತ್ತಿ ತುಂಬುವುದಕ್ಕೆ ನೀವು ಶಕ್ತರಾಗಿರಬೇಕು, ಈ ಏಕತೆ ಭಗವಂತನ ಪರಿಪೂರ್ಣ ಪ್ರತ್ಯೇಕ ಏಕತೆಯಾಗಿದೆ, – ಪ್ರತ್ಯೇಕ ಎಂಬುದರ ಅರ್ಥ ಈ ದೈವೀ ಏಕತೆಯ ಹೊರತಾಗಿ ಬೇರೆ ಏನೂ ಅಸ್ತಿತ್ವದಲ್ಲಿರುವುದಿಲ್ಲ, ನಮಗೆ ಅತ್ಯಂತ ಅಸಹ್ಯವೆನಿಸುವ ವಿಷಯಗಳೂ ಆ ಏಕತೆಯಲ್ಲಿರುತ್ತವೆ.

ಆದರೆ ಅದು ಭವಗಂತ. ಅವನ ಹೊರತಾಗಿ ಬೇರೇನೂ ಇಲ್ಲ. ಇದನ್ನೇ ನಾವು ಬೆಳಗಿನಿಂದ ಸಾಯಂಕಾಲದ ವರೆಗೆ, ಸಾಯಂಕಾಲದಿಂದ ಬೆಳಗಾಗುವ ವರೆಗೆ ಮತ್ತೆ ಮತ್ತೆ ನಮಗೆ ಹೇಳಿಕೊಳ್ಳುತ್ತಿರಬೇಕು, ಏಕೆಂದರೆ ನಾವು ಅದನ್ನು ಪ್ರತಿಕ್ಷಣ ಮರೆತುಬಿಡುತ್ತೇವೆ.

**(10/102–03)** **– ಶ್ರೀಮಾತೆ**

*

## ದೇವ ಮತ್ತು ವಿಶ್ವ

ಸಮಸ್ಯೆಗೆ ಏಕೈಕ ಪರಿಹಾರವಿದೆ – ಮೂಲದಲ್ಲಿ ದೇವ ಹಾಗೂ ವಿಶ್ವ ಇವರಲ್ಲಿ ಭಿನ್ನತೆಯನ್ನು ಮಾಡಬಾರದು. ವಿಶ್ವ ಸ್ಥಳಾವಕಾಶದಲ್ಲಿ ಪ್ರಕ್ಷೇಪಿತವಾದ ದೇವ, ಮತ್ತು ಮೂಲದಲ್ಲಿ ದೇವ ವಿಶ್ವವಾಗಿದ್ದಾನೆ. ಯಾವುದೇ ಮುಖದಲ್ಲಿ ಇರುವ ವಿಷಯ ಅದೊಂದೇ. ನೀವು ಅವುಗಳನ್ನು ವಿಭಜಿಸಲಾರಿರಿ. ಅದು "ಸೃಷ್ಟಿಕರ್ತ" ಮತ್ತು "ಅವನ ಕಾರ್ಯ" ಎಂಬ ಕಲ್ಪನೆಗೆ ವಿರುದ್ಧವಾದದ್ದು. ಸೃಷ್ಟಿಕರ್ತ ಮತ್ತು ಅವನ ಕಾರ್ಯ ಎಂಬುದು ಕೇವಲ ಮಾತನಾಡುವುದಕ್ಕೆ ಬಹಳ ಅನುಕೂಲಕರ–



ವಾದದ್ದು ಮತ್ತು ಅದು ವಿವರಣೆ ಕೊಡುವುದನ್ನು ಅತಿ ಸುಲಭವಾದದ್ದನ್ನಾಗಿ ಮಾಡುತ್ತದೆ, ಬೋಧನೆ ಬಹಳ ಪ್ರಾಥಮಿಕ ರೂಪದ್ದಾಗುತ್ತದೆ. ಆದರೆ ಅದು ಸತ್ಯವಲ್ಲ. ಮತ್ತು ನಂತರ ನೀವು ಹೇಳುತ್ತೀರಿ: "ಸರ್ವ ಸಮರ್ಥನಾದ ದೇವ ಜಗತ್ತು ಈ ರೀತಿಯದಾಗಿರುವುದಕ್ಕೆ ಏಕೆ ಬಿಟ್ಟುಕೊಟ್ಟ" ಎಂದು. ಆದರೆ ಅದು ನಿಮ್ಮದೇ ಕಲ್ಪನೆ. ಏಕೆಂದರೆ ನೀವೇ ಸ್ವತಃ ಅಸಂತೋಷಕರ ಪರಿಸ್ಥಿತಿಗಳ ಮಧ್ಯೆ ಇರುವ ಯೋಗ ನಿಮ್ಮದಾಗಿದೆ. ಹಾಗಾಗಿ ನೀವು ಅದನ್ನು ದೇವನ ಮೇಲೆ ಪ್ರಕ್ಷೇಪಿಸಿ ಅವನಿಗೆ ಹೇಳುತ್ತೀರಿ: "ಇಂತಹ ಜಗತ್ತನ್ನೇಕೆ ಮಾಡಿದೆ?" – "ನಾನದನ್ನು ಮಾಡಲಿಲ್ಲ. ಅದು ಸ್ವತಃ ನೀನೇ ಆಗಿದೆ. ಮತ್ತು ನೀನು ಮತ್ತೆ ನಾನೇ ಸ್ವತಃ ಆಗುವಂತಾದರೆ ಈಗ ನಿನಗುಂಟಾಗುತ್ತಿರುವ ಭಾವನೆ ಆಗ ಬರುವುದಿಲ್ಲ. ನೀನು ಅನುಭವಕ್ಕೆ ತಂದುಕೊಳ್ಳುತ್ತಿರುವ ಭಾವನೆ ಬರುವ ಹಾಗಾಗುವುದಕ್ಕೆ ನೀನು ನಾನಾಗಿರದೆ ಇರುವುದು ಕಾರಣವಾಗಿದೆ." ಉತ್ತರ ರೂಪದಲ್ಲಿ ಇದನ್ನು ದೇವ ನಿನಗೆ ಹೇಳಬಹುದು. ನಿಮ್ಮ ಪ್ರಜ್ಞೆಯನ್ನು ದೈವೀ ಪ್ರಜ್ಞೆಯೊಂದಿಗೆ ಏಕವಾಗಿಸುವುದರಲ್ಲಿ ನೀವು ಯಶಸ್ವಿಯಾದರೆ ಯಾವ ಸಮಸ್ಯೆಯೂ ಉಳಿದುಕೊಂಡಿರುವುದಿಲ್ಲ ಎಂಬುದು ವಾಸ್ತವ ಸಂಗತಿ. ಪ್ರತಿಯೊಂದೂ ಬಹಳ ಸ್ವಾಭಾವಿಕ, ಸರಳ, ಸರಿಯಾದದ್ದು ಮತ್ತು ನಿಖರವಾಗಿ ಏನಾಗಿರಬೇಕೋ ಅದಾಗಿರುತ್ತದೆ.

**(5/311)** **– ಶ್ರೀಮಾತೆ**

*

## ಪ್ರಶ್ನೋತ್ತರಗಳು

**ಪ್ರಶ್ನೆ :** *ಏಕಾಗ್ರತೆ ಮತ್ತು ಧ್ಯಾನ ಇವುಗಳ ನಡುವಿರುವ ವ್ಯತ್ಯಾಸವೇನು?*

**ಶ್ರೀ ಅ :** ನಮ್ಮ ಯೋಗಕ್ಕಾಗಿ ಏಕಾಗ್ರತೆಯ ಅರ್ಥ ಪ್ರಜ್ಞೆಯನ್ನು ಒಂದು ವಿಶಿಷ್ಟ ಸ್ಥಿತಿ (ಉದಾ: ಶಾಂತಿಯಿಂದಿರುವ ಸ್ಥಿತಿ) ಇಲ್ಲವೆ ಚಲನೆ (ಉದಾ: ಅಭೀಪ್ಸೆ ಪಡುತ್ತಿರುವುದು, ಸಂಕಲ್ಪ ಮಾಡುತ್ತಿರುವುದು, ಶ್ರೀಮಾತೆಯವರೊಡನೆ ಸಂಪರ್ಕದಲ್ಲಿ ಬರುತ್ತಿರುವುದು, ಶ್ರೀಮಾತೆಯವರನ್ನು ನೆನೆಯುತ್ತಿರುವುದು) ಇವುಗಳಲ್ಲಿ ಯಾವುದೊಂದರ ಮೇಲೆ ಸ್ಥಿರಗೊಳಿಸುವುದಾಗಿದೆ.

**ಪ್ರಶ್ನೆ :** *"ಶ್ರೀಮಾತೆಯವರು ಯಾವಾಗಲೂ ತಮ್ಮ ಆಂತರಿಕ ಸತ್ತೆಯಲ್ಲಿ ಏಕಾಗ್ರಗೊಂಡ ಪ್ರಜ್ಞೆಯಲ್ಲಿರುತ್ತಾರೆ" ಎಂದು ನೀವು ಬರೆದಿದ್ದೀರಿ. "ಏಕಾಗ್ರಗೊಂಡ ಪ್ರಜ್ಞೆ" ಎಂದರೇನು?*

**ಶ್ರೀ ಅ :** ಉಚ್ಚತರ ಪ್ರಜ್ಞೆ ಏಕಾಗ್ರಗೊಂಡ ಪ್ರಜ್ಞೆಯಾಗಿರುತ್ತದೆ, ಅದು ಭಗವಂತ–ನೊಂದಿಗಿನ ಏಕತೆಯಲ್ಲಿ ಏಕಾಗ್ರಗೊಂಡಿದ್ದು ಹಾಗೂ ದೈವೀ ಸಂಕಲ್ಪವನ್ನು ಕಾರ್ಯಗತಗೊಳಿಸುವಂತಹದು, ಸಾಮಾನ್ಯ ಮಾನವ ಪ್ರಜ್ಞೆ ಮಾಡುವಂತೆ ಆ ಅಥವಾ ಈ ಮಾನಸಿಕ ವಿಚಾರ, ಇಲ್ಲವೆ ಪ್ರಾಣಿಕ ಆಸೆ, ಇಲ್ಲವೆ ಭೌತಿಕ ಆವಶ್ಯಕತೆ ಇಂತಹವುಗಳ ಹಿಂದೆ ರಭಸದಿಂದ ಅಲೆದಾಡುತ್ತ ಹರಡಿ ಹೋಗದೆ ಇರುವಂತಹದು – ಹಾಗೆಯೇ ನೂರಾರು ಅವ್ಯವಸ್ಥಿತ ಯೋಚನೆಗಳ ಮುತ್ತಿಗೆಗೆ ಒಳಗಾಗದಂತಹದು, ಆದರೆ ತನ್ನ ಮೇಲೆ ಪ್ರಭುತ್ವ ಹೊಂದಿರುವಂತಹದು, ಕೇಂದ್ರೀಕೃತವಾದದ್ದು ಮತ್ತು ಸಾಮರಸ್ಯವುಳ್ಳದ್ದು.

**ಪ್ರಶ್ನೆ :** *ಯಶಸ್ವಿ ಧ್ಯಾನದ ಕುರುಹು ಯಾವುದು?*

**ಶ್ರೀ ಅ :** ಆಳಾತಿ ಆಳದ ಇಲ್ಲವೆ ಉಚ್ಚತರ ಪ್ರಜ್ಞೆಯಲ್ಲಿ ಪ್ರವೇಶಿಸುವುದು ಇಲ್ಲವೆ ಆ ಆಳಾತಿ ಆಳದ ಇಲ್ಲವೆ ಉಚ್ಚತರ ಪ್ರಜ್ಞೆ ನಿಮ್ಮಲ್ಲಿ ಇಳಿದು ಬರುವುದು – ಅದು ನಿಜವಾದ ಯಶಸ್ವಿ ಧ್ಯಾನದ ಕುರುಹು.

**ಪ್ರಶ್ನೆ :** *ಧ್ಯಾನ ಕೈಕೊಳ್ಳದೆ ಉಚ್ಚತರ ಅನುಭವಗಳನ್ನು ಪಡೆಯುವುದು ಅಸಾಧ್ಯ ಎಂಬುದು ಸತ್ಯವಾದದ್ದೆ?*

**ಶ್ರೀ ಅ :** ಸ್ವಲ್ಪ ಮಟ್ಟಿಗಿನ ಧ್ಯಾನದಿಂದ ಇದು ಹೆಚ್ಚು ಸುಲಭವಾದದ್ದಾಗುತ್ತದೆ. – ಆದರೆ ಎಂದೂ ಧ್ಯಾನಕ್ಕಾಗಿ ಕುಳಿತುಕೊಳ್ಳದೆ ಇದ್ದವರಿಗೂ ಇಂತಹ ಅನುಭವ–ಗಳಾಗುತ್ತವೆ. – ಹಾಗಾಗಿ ಅಸಾಧ್ಯ ಎಂದು ಹೇಳುವುದರ ಪ್ರಯೋಜನವೇನು?

**ಪ್ರಶ್ನೆ :** *ಅನುಭವ, ಸಾಫಲ್ಯ (realisation) ಮತ್ತು ಸಿದ್ಧಿ ಇವುಗಳ ನಡುವಿರುವ ವ್ಯತ್ಯಾಸವೇನು?*

**ಶ್ರೀ ಅ :** ಯೋಗದಲ್ಲಿ ಸಂಭವಿಸಬಹುದಾದ ಬಹುಮಟ್ಟಿಗಿನ ಎಲ್ಲ ಘಟನೆಗಳಿಗೆ ಅನ್ವಯವಾಗುವ ಶಬ್ದ ಅನುಭವ. ಸ್ವಲ್ಪ ಮಟ್ಟಿಗಿನದು ನೆಲೆಸಿದಾಗ ಮಾತ್ರ ಅದು ಆಗ ಕೇವಲ ಅನುಭವವಾಗಿರದೆ ಸಿದ್ಧಿಯ ಭಾಗವಾಗಿರುತ್ತದೆ. ಉದಾ: ಶಾಂತಿ ಬರುವುದು ಮತ್ತು ಹೋಗಿಬಿಡುವುದು ಅನುಭವ – ಅದು ನೆಲೆಸಿದಾಗ ಮತ್ತು ಹೋಗದೆ ಇದ್ದಾಗ ಅದು ಒಂದು ಸಿದ್ಧಿ. ಸಾಫಲ್ಯ – ಇನ್ನೊಂದು ಬಗೆಯದು. ನೀವು ಯಾವುದೋ ಒಂದು ವಿಷಯ ಕುರಿತು ಅಭೀಪ್ಸೆಪಡುತ್ತಿದ್ದಾಗ ಅದು ನಿಮಗೆ ನಿಜವಾಗಿ ಪರಿಣಮಿಸಿದ್ದು. ಉದಾ: ಎಲ್ಲರಲ್ಲಿ ಭಗವಂತನಿದ್ದಾನೆ ಎಂಬ ವಿಚಾರ ನಿಮ್ಮಲ್ಲಿರುತ್ತದೆ, ಆದರೆ ಅದು ಕೇವಲ ಒಂದು ವಿಚಾರ, ಒಂದು ನಂಬಿಕೆ, ಭಗವಂತ



ಎಲ್ಲರಲ್ಲಿ ಇರುವ ಭಾವನೆ ಬಂದಾಗ ಇಲ್ಲವೆ ಅವನನ್ನು ನೋಡಿದಾಗ ಅದು ಸಾಫಲ್ಯ.

**ಪ್ರಶ್ನೆ :** *ದರ್ಶನ, ಅನುಭವ ಮತ್ತು ಸಾಫಲ್ಯ ಇವುಗಳ ನಡುವಿರುವ ವ್ಯತ್ಯಾಸವೇನು?*

**ಶ್ರೀ ಅ :** ನೀವು ದೈವೀ ಪ್ರಕಾಶವನ್ನು ನೋಡಿದಾಗ ಅದು ದರ್ಶನ, ದೈವೀ ಪ್ರಕಾಶ ನಿಮ್ಮೊಳಗೆ ಪ್ರವೇಶಿಸುತ್ತಿರುವುದರ ಭಾವನೆ ಬಂದಾಗ ಅದು ಅನುಭವ. ದೈವೀ ಪ್ರಕಾಶ ನಿಮ್ಮೊಳಗೆ ನೆಲೆಸಿದಾಗ, ಜ್ಞಾನೋದಯವನ್ನೂ, ಜ್ಞಾನವನ್ನೂ ತಂದುಕೊಟ್ಟಾಗ ಅದು ಸಾಫಲ್ಯ. ಆದರೆ ಸಾಮಾನ್ಯ ದರ್ಶನಗಳನ್ನೂ ಕೂಡ ಅನುಭವಗಳೆಂದು ಕರೆಯುತ್ತಾರೆ.

**(Elements of Yoga, Ch. 9)** **– ಶ್ರೀ ಅರವಿಂದರು**

*

## ನಂತರ ಅನುಸರಿಸಿದರಾದೀತು ಎಂದು ಭಾವಿಸಿರುವ ಪಥ (ಕತೆ)

"ನಂತರ ಅನುಸರಿಸಿದರಾದೀತು ಎಂದು ಭಾವಿಸಿರುವ ಪಥ ಮತ್ತು ನಾಳಿನ ದಾರಿ ಕೇವಲ ಏನೇನೂ ಆಗಿರದ ಕೋಟೆಯತ್ತ ಕರೆದೊಯ್ಯುತ್ತದೆ."

ದಾರಿಯ ಬಳಿ ನಾನಾ ಬಣ್ಣಗಳುಳ್ಳ ಪುಷ್ಪಗಳು ಕಣ್ಣಿಗೆ ಹರ್ಷವನ್ನುಂಟು ಮಾಡುತ್ತಿವೆ, ಗಂಟುಗಂಟಾದ ಟೊಂಗೆಗಳುಳ್ಳ ಚಿಕ್ಕ ಗಿಡಗಳ ಮೇಲೆ ಕೆಂಪು ಬಣ್ಣದ ಗುಂಡಗಿರುವ ಚಿಕ್ಕ ಹಣ್ಣುಗಳು (berries) ಮಿನುಗುತ್ತಿವೆ, ದೂರದಲ್ಲಿ ಪಕ್ವವಾದ ಪೈರಿನ ಮೇಲೆ ಪ್ರಜ್ವಲಿಸುವ ಸೂರ್ಯನ ಕಿರಣಗಳು ಬಂಗಾರ ವರ್ಣದಿಂದ ಹೊಳೆಯುತ್ತಿವೆ.

ತರುಣ ಪ್ರಯಾಣಿಕನೊಬ್ಬ ದಾರಿಗುಂಟ, ಮುಂಜಾವಿನ ಪರಿಶುದ್ಧ ಹವೆಯಲ್ಲಿ ಉಸಿರಾಡಿಸುತ್ತ ಸಂತೋಷದಿಂದ ಚುರುಕಾಗಿ ನಡೆಯುತ್ತಿದ್ದಾನೆ. ಭವಿಷ್ಯತ್ತಿನ ಬಗ್ಗೆ ಯಾವ ಕಾಳಜಿ ಹೊಂದಿರದೆ ಸಂತೋಷದಿಂದಿರುವಂತೆ ಕಂಡುಬರುತ್ತಾನೆ. ಅವನು ಅನುಸರಿಸುತ್ತಿರುವ ದಾರಿ ಎಲ್ಲ ದಿಕ್ಕುಗಳಲ್ಲಿ ಬೇರೆ ಬೇರೆಯಾಗಿ ಹೋಗಿರುವ ಕೂಡುದಾರಿಗಳಿರುವತ್ತ ಅವನನ್ನು ಕರೆದೊಯ್ಯುತ್ತದೆ.

ಎಲ್ಲೆಡೆಯಲ್ಲಿ ಅಡ್ಡಡ್ಡಲಾಗಿ ಹರಡಿಕೊಂಡಿದ್ದ ಹೆಜ್ಜೆ ಗುರುತುಗಳನ್ನು ಆ ತರುಣ ನೋಡಬಲ್ಲವನಾಗಿದ್ದಾನೆ. ಆಕಾಶದಲ್ಲಿ ಸೂರ್ಯ ಎಂದಿನಂತೆ ಪ್ರಜ್ವಲಿಸುತ್ತಿದ್ದಾನೆ, ಗಿಡಗಳಲ್ಲಿ ಹಕ್ಕಿಗಳು ಹಾಡುತ್ತಿವೆ, ಆ ದಿನ ಬಹಳ ಸುಂದರವಾಗಿರುವ ಭರವಸೆ ನೀಡುತ್ತಿದೆ. ಬೇರೇನನ್ನೂ ಯೋಚಿಸದೆ ಆ ಪ್ರಯಾಣಿಕ ತನಗೆ ಅತ್ಯಂತ ಹತ್ತಿರವಿದ್ದ

ದಾರಿಯನ್ನು ಆಯ್ದುಕೊಳ್ಳುತ್ತಾನೆ, ಅದು ಒಟ್ಟಿನಲ್ಲಿ ಬಹಳ ವ್ಯಾವಹಾರಿಕ–ವಾದದ್ದೆನಿಸುತ್ತದೆ; ಒಂದು ಕ್ಷಣ ತಾನು ಇನ್ನೊಂದು ದಾರಿ ಹಿಡಿದು ಹೋಗಬಹುದಾಗಿತ್ತೇನೋ ಎಂದು ಅವನಿಗೆ ಹೊಳೆಯುತ್ತದೆ, ಆದರೆ ತಾನು ಅನುಸರಿಸಿ ಹೋಗುತ್ತಿದ್ದ ದಾರಿ ಏನೂ ಇಲ್ಲದಲ್ಲಿ ಕರೆದೊಯ್ದರೆ ಆಗ ಮರಳಿ ಬರಲು ಸಾಕಷ್ಟು ಸಮಯವಿರುತ್ತದೆ. "ಹೊರಳಿ ಹೋಗು, ಹೊರಳಿ ಹೋಗು" ಎಂದು ಒಂದು ಧ್ವನಿ ಅವನಿಗೆ ಹೇಳುತ್ತಿರುವಂತೆ ತೋರಿಬರುತ್ತದೆ, ಆದರೆ ಅವನ ಸುತ್ತಲಿರುವ ಎಲ್ಲವೂ ಮೋಹಕವಾಗಿದೆ, ಸುಂದರವಾಗಿದೆ. ಅವನೇನು ಮಾಡಬೇಕು? ಅವನಿಗೆ ಅದು ತಿಳಿಯದು. ಅವನು ಯಾವ ನಿರ್ಣಯಕ್ಕೂ ಬಾರದೆ ಹಾಗೆಯೇ ಮುಂದೆ ಸಾಗುತ್ತಾನೆ. ಆ ಕ್ಷಣದ ಇಂದ್ರಿಯ ಸುಖಗಳಿಂದ ಅವನು ಹರ್ಷಿತನಾಗಿದ್ದಾನೆ. "ಅಲ್ಪ ಸಮಯದ ನಂತರ ನಾನು ಯೋಚಿಸುತ್ತೇನೆ, ನನಗೆ ಸಾಕಷ್ಟು ವೇಳೆಯಿದೆ" ಎಂದು ಆ ಧ್ವನಿಗೆ ಉತ್ತರ ನೀಡುತ್ತಾನೆ. ಅವನ ಸುತ್ತಲಿದ್ದ ಕಾಡು ಹುಲ್ಲು "ನಂತರ" ಎಂದು ಅವನ ಕಿವಿಯಲ್ಲಿ ಪಿಸುಗುಟ್ಟುತ್ತವೆ. ಅಹಾ, ಸೂರ್ಯ ತನ್ನ ಪ್ರಜ್ವಲಿಸುತ್ತಿರುವ ಕಿರಣಗಳಿಂದ ಗಾಳಿಯನ್ನು ಬೆಚ್ಚಗಿರಿಸುತ್ತಿದ್ದಾಗ ಸುವಾಸನೆ ಬೀರುವ ಗಾಳಿಯಲ್ಲಿ ಉಸಿರಾಡಿಸುತ್ತಿರುವುದು ಎಷ್ಟು ಆಹ್ಲಾದಕರವಾಗಿರುತ್ತದೆ. ನಂತರ, ನಂತರ, ಪ್ರಯಾಣಿಕ ಹಾಗೆಯೇ ನಡೆಯುತ್ತ ಹೋಗುತ್ತಾನೆ. ದೂರಿನಿಂದ ಧ್ವನಿಗಳು ಕೇಳಿಬರುತ್ತಿವೆ. "ಎಲ್ಲಿಗೆ ಹೊರಟಿರುವೆ? ಬಡ ಮೂರ್ಖನೆ, ನಿನ್ನ ವಿನಾಶದತ್ತ ನೀನು ಸಾಗುತ್ತಿರುವುದನ್ನು ನೀನು ನೋಡಲಾರೆಯಾ? ನೀನಿನ್ನೂ ತರುಣ, ನಮ್ಮಲ್ಲಿ ಸುಂದರ–ವಾಗಿರುವುದರತ್ತ, ಒಳ್ಳೆಯದಾಗಿರುವುದರತ್ತ ಮತ್ತು ಸತ್ಯವಾಗಿರುವುದರತ್ತ ಬಾ. ಸೋಮಾರಿತನ ಮತ್ತು ದೌರ್ಬಲ್ಯಗಳಿಂದ ನೀನು ದಾರಿ ತಪ್ಪಿಸಿಕೊಳ್ಳಬೇಡ, ವರ್ತಮಾನದಲ್ಲಿ ನಿದ್ದೆ ಹೋಗಬೇಡ, ಭವಿಷ್ಯತ್ತಿನೆಡೆಗೆ ಬಾ," ಈ ಧ್ವನಿಗಳಿಗೆ ಸ್ವಾಗತ ನೀಡಲಾಗದ ಪ್ರಯಾಣಿಕ "ನಂತರ, ನಂತರ" ಎಂದು ಹೇಳುತ್ತಾನೆ. ಹೂವುಗಳು ಅವನತ್ತ ಮುಗುಳ್ನಗು ಬೀರುತ್ತವೆ ಮತ್ತು "ನಂತರ" ಎನ್ನುವುದನ್ನು ಪ್ರತಿಧ್ವನಿಸುತ್ತವೆ. ದಾರಿ ಹೆಚ್ಚು, ಹೆಚ್ಚಾಗಿ ವಿಸ್ತಾರಗೊಳ್ಳುತ್ತ ಹೋಗುತ್ತದೆ. ಸೂರ್ಯ ನೆತ್ತಿಯ ಮೇಲೆ ಬರುತ್ತಾನೆ. ಅದು ವೈಭವೋಪೇತವಾದ ದಿನ. ದಾರಿ ಒಂದು ದೊಡ್ಡ ರಸ್ತೆಯಾಗುತ್ತದೆ.

ಆ ರಸ್ತೆ ಬಿಳಿ ಬಣ್ಣದ್ದಾಗಿದೆ, ಧೂಳಿನಿಂದ ತುಂಬಿಕೊಂಡಿದೆ, ರಸ್ತೆಯ ಬದಿಗೆ ಸಾಲಾಗಿ ಇನ್ನೂ ಚಿಕ್ಕವಾಗಿರುವ ಬರ್ಚ(Birch) ಗಿಡಗಳಿವೆ, ಚಿಕ್ಕ ಹಳ್ಳದಲ್ಲಿ ಹರಿಯುತ್ತಿರುವ ನೀರಿನ ಗುಳಗುಳ ಶಬ್ದ ಕೇಳಿ ಬರುತ್ತಿದೆ. ಆದರೆ ಕೊನೆ ಎಲ್ಲಿದೆ



ಎಂದು ಕಂಡುಬರದ ರಸ್ತೆಯ ಮೇಲೆ ಪ್ರತಿಯೊಂದು ದಿಕ್ಕಿನಲ್ಲಿ ವ್ಯರ್ಥವಾಗಿ ಕಣ್ಣಾಡಿಸುತ್ತಾನೆ.

ರಹಸ್ಯ ಅಸೌಖ್ಯಕ್ಕೀಡಾದ ಆ ತರುಣ "ನಾನೆಲ್ಲಿದ್ದೇನೆ? ನಾನೆಲ್ಲಿಗೆ ಹೋಗುತ್ತಿದ್ದೇನೆ? ಅದರಿಂದೇನಾಗಬೇಕಾಗಿದೆ, ಯೋಚಿಸುವುದೇಕೆ? ಕಾರ್ಯ ಕೈಕೊಳ್ಳುವುದೇಕೆ? ಕೊನೆಯಿರದ ರಸ್ತೆಯನ್ನನುಸರಿಸಿ ಸಹಜ ಪ್ರವೃತ್ತಿಯಿಂದ ಹೋಗೋಣ, ನಡೆಯುತ್ತಿರೋಣ. ನಾನು ನಾಳೆ ಯೋಚಿಸುವೆ" ಎಂದು ಕೂಗಿ ಹೇಳುತ್ತಾನೆ.

ಚಿಕ್ಕ ಗಿಡಗಳು ಮಾಯವಾಗಿವೆ, ರಸ್ತೆಯ ಎಡಬಲಗಳಲ್ಲಿ ಓಕ ಗಿಡಗಳ ಸಾಲುಗಳಿವೆ, ರಸ್ತೆಯ ಎರಡೂ ಬದಿಗಳಲ್ಲಿ ಚರಂಡಿಗಳು ಮುಂದುವರಿದು–ಕೊಂಡು ಹೋಗಿವೆ. ಪ್ರಯಾಣಿಕನಿಗೆ ದಣಿದುಕೊಂಡ ಭಾವನೆ ಬರುತ್ತಿಲ್ಲ, ಬುದ್ಧಿ ವಿಕಲ್ಪವಾದವನ ಹಾಗೆ ನಡೆದುಕೊಂಡು ಹೋಗುತ್ತಿದ್ದಾನೆ.

ಚರಂಡಿ ಆಳವಾಗುತ್ತ ಹೋಗುತ್ತದೆ, ಓಕ ಗಿಡಗಳು ಫರ ಗಿಡಗಳಿಗೆ ಸ್ಥಾನ ಬಿಟ್ಟುಕೊಟ್ಟಿವೆ, ಸೂರ್ಯ ಮುಳುಗಲು ಪ್ರಾರಂಭಿಸಿದ್ದಾನೆ, ಪ್ರಯಾಣಿಕ ತನ್ನ ಸುತ್ತಲೂ ಇರುವುದನ್ನು ನೋಡುತ್ತಾನೆ. ಚರಂಡಿಯ ಕೊರಕಲಿನಲ್ಲಿ ಮಾನವ ಆಕೃತಿಗಳು ಹೊರಳಾಡುತ್ತಿರುವುದನ್ನು ನೋಡುತ್ತಾನೆ, ಅವರು ಫರ ಗಿಡಗಳನ್ನು, ಕಲ್ಲು ಬಂಡೆಗಳನ್ನು, ನೆಲದಲ್ಲಿ ಹೊರಬಂದಿರುವ ಗಿಡಗಳ ಬೇರುಗಳನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಕೆಲವರು ಚರಂಡಿಯಿಂದ ಹೊರಬರಲು ಹೆಚ್ಚಿನ ಪ್ರಯತ್ನ ಮಾಡುತ್ತಾರೆ, ಆದರೆ ಅವರು ತುದಿಯವರೆಗೆ ಬಂದ ನಂತರ ತಮ್ಮ ತಲೆಯನ್ನು ತಿರುಗಿಸುತ್ತಾರೆ ಮತ್ತು ಸರಿದು ಹಿಂದೆ ಬಿದ್ದುಬಿಡಲು ಅನುವು ಮಾಡಿಕೊಳ್ಳುತ್ತಾರೆ.

"ಈ ಸ್ಥಳದಿಂದ ಓಡಿ ಹೋಗು, ಕೂಡು ದಾರಿಗಳು ಇರುವಲ್ಲಿಗೆ ತಿರುಗಿ ಹೋಗು, ಇನ್ನೂ ಸಮಯವಿದೆ" ಎಂದು ಕ್ಷೀಣ ಧ್ವನಿಗಳು ಹೇಳುತ್ತವೆ. ಆ ತರುಣ ಹಿಂದು ಮುಂದು ನೋಡುತ್ತಾನೆ, "ನಾಳೆ" ಎಂದು ಆ ಧ್ವನಿಗಳಿಗೆ ಉತ್ತರ ನೀಡುತ್ತಾನೆ, ಚರಂಡಿಯ ಕೊರಕಲದಲ್ಲಿ ಹೊರಳಾಡುತ್ತಿರುವವರನ್ನು ನೋಡ–ಲಾಗದಂತೆ ತನ್ನ ಮುಖ ಮುಚ್ಚಿಕೊಳ್ಳುತ್ತಾನೆ, ಮುಂದೆ ಹೋಗಲು ತಡೆಯಲಾಗದ ಒತ್ತಡಕ್ಕೊಳಗಾಗಿ ರಸ್ತೆಯ ಮೇಲೆ ಓಡಲು ಪ್ರಾರಂಭಿಸುತ್ತಾನೆ. ಇಲ್ಲಿಂದ ಹೊರಗೆ ಹೋಗಲು ದಾರಿಯಿದೆಯೋ ಎಂಬುದನ್ನು ಕುರಿತು ಅವನು ಚಿಂತಿಸುವುದಿಲ್ಲ. ಅವನ ಹುಬ್ಬುಗಳು ಸುಕ್ಕುಗಟ್ಟುತ್ತವೆ, ಅರಿವೆಗಳು ಅಸ್ತವ್ಯಸ್ತವಾಗುತ್ತವೆ, ಹತಾಶನಾದ ಅವನು ರಸ್ತೆಯ ಮೇಲೆ ಓಡಿ ಹೋಗುತ್ತಾನೆ. ಕೊನೆಗೆ ತಾನು ಆ ಶಾಪಗ್ರಸ್ತ

ಸ್ಥಳದಿಂದ ಬಹಳ ದೂರ ಬಂದಿದ್ದೇನೆ ಎಂದು ಭಾವಿಸಿ ಮುಚ್ಚಿಕೊಂಡಿದ್ದ ತನ್ನ ಕಣ್ಣುಗಳನ್ನು ತೆರೆಯುತ್ತಾನೆ, ಅಲ್ಲಿ ಫರಗಿಡಗಳಿಲ್ಲ, ಸುತ್ತಲೆಲ್ಲ ಬರಡಾದ ಕಲ್ಲು ಬಂಡೆಗಳು ಬೂದಿ ಬಣ್ಣದ ಧೂಳು ತುಂಬಿಕೊಂಡಿವೆ. ಸೂರ್ಯ ಕ್ಷಿತಿಜದ ಕೆಳಗಿಳಿದು ಹೋಗಿದ್ದಾನೆ, ಕತ್ತಲು ಆವರಿಸುತ್ತಿದೆ, ರಸ್ತೆ ಕೊನೆಯಿಲ್ಲದ ಮರಳು ಗಾಡಿನಲ್ಲಿ ತನ್ನನ್ನು ಕಳೆದುಕೊಂಡಿದೆ. ಹತಾಶನಾದ ಪ್ರಯಾಣಿಕ ಬಹಳ ದೂರ ಓಡಿಬಂದುದರಿಂದ ದಣಿದುಕೊಂಡಿದ್ದಾನೆ, ಒಂದೆಡೆ ನಿಲ್ಲಲು ಬಯಸುತ್ತಾನೆ, ಆದರೆ ಅವನು ಮುಂದೆ ನಡೆದು ಹೋಗಲೇಬೇಕಾಗಿದೆ. ಅವನ ಸುತ್ತಲೆಲ್ಲ ಹಾಳಾದದ್ದು ತುಂಬಿಕೊಂಡಿದೆ, ದಮನಕ್ಕೊಳಗಾದ ಆಕ್ರಂದನಗಳನ್ನು ಅವನು ಕೇಳುತ್ತಾನೆ, ಅವನ ಕಾಲುಗಳು ಅಸ್ಥಿಪಂಜರ(skeletons)ಗಳ ಮೇಲೆ ಎಡವುತ್ತ ಸಾಗುತ್ತವೆ. ದೂರದಲ್ಲಿ ದಟ್ಟವಾದ ಮಂಜು ಭಯವನ್ನುಂಟು ಮಾಡುವ ಆಕಾರ ತಳೆಯುತ್ತಿದೆ, ಕಪ್ಪು ರೂಪಗಳು ಮಬ್ಬಾಗಿ ಮೇಲೆದ್ದು ಬರುತ್ತಿವೆ. ಭವ್ಯವಾದ, ಆಕಾರಗೆಟ್ಟ ಏನೋ ಒಂದಿರುವ ಸೂಚನೆ ತಾನೇ ತಾನಾಗಿ ಬರುತ್ತಿದೆ. ಗುರಿಯಿರುವುದರ ಹಾಗೂ ಅದು ತನ್ನಿಂದ ದೂರ ಓಡಿ ಹೋಗುತ್ತಿರುವುದರ ಭಾವನೆ ತಂದುಕೊಂಡ ಪ್ರಯಾಣಿಕ ನಡೆದು ಹೋಗುತ್ತಿರುವುದಕ್ಕಿಂತ ಹೆಚ್ಚಾಗಿ ಜಿಗಿಯುತ್ತ ಹೋಗುತ್ತಾನೆ, ಕಾಡು ಧ್ವನಿಗಳು ಅವನ ಹೆಜ್ಜೆಗಳಿಗೆ ಮಾರ್ಗದರ್ಶನ ಮಾಡುತ್ತವೆ, ಅವನು ಭೂತಗಳನ್ನು ಸವರಿಕೊಳ್ಳುತ್ತ ಹೋಗುತ್ತಾನೆ.

ಕೊನೆಗೆ ಅವನು ತನ್ನ ಮುಂದೆ ಭವ್ಯ ಭವನವನ್ನು ನೋಡುತ್ತಾನೆ. ಅಲ್ಲಿ ಅಂಧಕಾರ ಕವಿದಿತ್ತು, ಏಕಾಕಿತನವಿತ್ತು, ಮಬ್ಬುತನವಿತ್ತು, ಮನುಷ್ಯ ಅದನ್ನು "ದೆವ್ವ ಹಿಡಿದ ಕೋಟೆ" ಎಂದು ನಡುಗುತ್ತ ಹೇಳಬಹುದಾಗಿತ್ತು. ಆದರೆ ಆ ಸ್ಥಳ ನಿರಾಶಾದಾಯಕವಾಗಿರುವುದರತ್ತ ಆ ತರುಣ ಲಕ್ಷ್ಯಗೊಡುವುದಿಲ್ಲ. ಈ ದೊಡ್ಡ ಗೋಡೆಗಳು ಅವನ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ, ಭಯವನ್ನುಂಟು ಮಾಡುವ ಗೋಪುರಗಳ ದೃಶ್ಯ ನೋಡಿ ಅವನು ಭಯದಿಂದ ಕಂಪಿಸುವುದಿಲ್ಲ, ತಾನು ತಲುಪಬೇಕಾಗಿದ್ದ ಗುರಿಯತ್ತ ಬಂದಿದ್ದೇನೆ ಎಂದು ಮಾತ್ರ ಅವನು ಯೋಚಿಸುತ್ತಾನೆ, ಒಂದು ಗೋಡೆಯನ್ನು ಅವನು ಸವರಿಕೊಂಡು ಹೋಗುತ್ತಾನೆ, ಆ ಗೋಡೆ ಮುರಿದು ಬಿದ್ದು ಚೂರುಚೂರಾಗುತ್ತದೆ. ತಕ್ಷಣ ಅವನ ಸುತ್ತಲಿರುವ ಎಲ್ಲವೂ ಕುಸಿದು ಬೀಳುತ್ತದೆ. ಗೋಪುರಗಳು, ಕೋಟೆ ಮಾಳಿಗೆಗಳು, ಗೋಡೆಗಳು ಇವೆಲ್ಲವೂ ಮಾಯವಾದವು, ನೆಲವನ್ನಾವರಿಸಿದ ಧೂಳಿನಲ್ಲಿ ಇನ್ನೂ ಹೆಚ್ಚು ಧೂಳವನ್ನೆಬ್ಬಿಸಿ ಮುಳುಗಿ ಹೋದವು.

ಗೂಗೆಗಳು, ಕಾಗೆಗಳು, ಬಾವಲಿಗಳು ಚೀತ್ಕಾರ ಮಾಡುತ್ತ ಹಾರಾಡುತ್ತಿವೆ, ಆ ಬಡ ಪ್ರಯಾಣಿಕನ ತಲೆಯ ಬಳಿ ಸುತ್ತು ಹೊಡೆಯುತ್ತಿವೆ. ಅವನು



ದಿಗ್ಭ್ರಮೆಗೊಂಡು ಮುಖ ಕೆಳಗೆ ಮಾಡಿಕೊಂಡು, ಸೋತವನಾಗಿ ನಿಂತ ಸ್ಥಾನದಲ್ಲಿ ಬೇರುಬಿಟ್ಟ ಹಾಗಿದ್ದಾನೆ. ಅವನಿಗೆ ಅಲುಗಾಡಲಾಗದು; ಒಮ್ಮೆಗೆ ಭಯಾನಕ–ವಾದುವುಗಳಲ್ಲಿ ಅತಿ ಭಯಾನಕವಾಗಿರುವ ಏಕಾಂಗಿತನ, ಹತಾಶೆ, ಜುಗುಪ್ಸೆ ಹೆಸರುಳ್ಳ ಭೂತಗಳು ತನ್ನೆದುರು ಮೇಲೆದ್ದು ಬರುವುದನ್ನು ಅವನು ನೋಡುತ್ತಾನೆ. ಆ ಹಾಳುಬಿದ್ದ ಜಾಗದಲ್ಲಿ ತಳಬುಡವಿಲ್ಲದ ಕಂದರದ ಮೇಲೆ ವ್ಯಥೆ ಹುಟ್ಟಿಸುವ, ನಿಸ್ತೇಜವಾಗಿದ್ದ ಆತ್ಮಹತ್ಯೆಯ ಇಣುಕು ನೋಟ ಅವನಿಗೆ ಕಾಣಿಸುತ್ತದೆ. ಈ ಎಲ್ಲ ಮಾರಕ ಭೂತಗಳು ಅವನನ್ನು ಸುತ್ತುಗಟ್ಟುತ್ತವೆ, ಗಟ್ಟಿಯಾಗಿ ಹಿಡಿದುಕೊಳ್ಳುತ್ತವೆ, ಬಾಯ್ತೆರೆದುಕೊಂಡಿರುವ ಆಳವಾದ ಕಂದರದತ್ತ ದೂಡುತ್ತವೆ. ಈ ಪ್ರತಿಭಟಿಸ–ಲಾಗದ ಶಕ್ತಿಯ ವಿರುದ್ಧ ಹೋರಾಡಲು ಆ ಬಡ ತರುಣ ಪ್ರಯತ್ನಿಸುತ್ತಾನೆ, ಅವನನ್ನು ಸುತ್ತಿರುವ, ಗಟ್ಟಿಯಾಗಿ ಹಿಡಿದುಕೊಂಡಿರುವ ಈ ಎಲ್ಲ ಅಗೋಚರ ತೋಳುಗಳಿಂದ ಕಿತ್ತುಕೊಂಡು ಹಿಂದೆಳೆದುಕೊಂಡು, ಓಡಿ ಹೋಗಲು ಅವನು ಬಯಸುತ್ತಾನೆ. ಆದರೆ ಈಗಾಗಲೆ ತಡವಾಗಿ ಹೋಗಿದೆ, ಆ ಮಾರಕ ಕಂದರದತ್ತ ಚಲಿಸುತ್ತಾನೆ, ಅದರಿಂದ ಸಮ್ಮೋಹನಕ್ಕೊಳಗಾಗಿ ಎಳೆತಕ್ಕೊಳಗಾದ ಭಾವನೆ ಅವನಿಗೆ ಬರುತ್ತದೆ. ಅವನು ಕೂಗಿ ಕರೆಯುತ್ತಾನೆ, ಆದರೆ ಅವನ ಕೂಗುಗಳಿಗೆ ಯಾವ ಧ್ವನಿಯೂ ಉತ್ತರ ನೀಡುವುದಿಲ್ಲ. ಅವನು ಆ ಭೂತಗಳನ್ನು ಹಿಡಿದುಕೊಳ್ಳುತ್ತಾನೆ, ಅವನ ಕಾಲ್ಕೆಳಗಿರುವುದೆಲ್ಲ ಕುಸಿದು ಹೋಗುತ್ತದೆ. ಅವನು ಕಂಗಾಲಾದ ಕಣ್ಣುಗಳಿಂದ ಶೂನ್ಯವನ್ನು ದಿಟ್ಟಿಸಿ ನೋಡುತ್ತಾನೆ, ಕೂಗುತ್ತಾನೆ, ಮೊರೆಯಿಡುತ್ತಾನೆ, ಕೊನೆಗೆ ಅನಿಷ್ಟವಾದುದರ ಕರಾಳ ನಗು ಘಂಟಾಘೋಷವಾಗಿ ಕೇಳಿಬರುತ್ತದೆ.

ಆ ಪ್ರಯಾಣಿಕ ಕಂದರದ ಅಂಚಿನಲ್ಲಿದ್ದಾನೆ, ಅವನ ಎಲ್ಲ ಪ್ರಯತ್ನಗಳು ವ್ಯರ್ಥವಾಗಿವೆ. ಮಹತ್ತರ ಹೋರಾಟದ ನಂತರ ಅವನು ಕೆಳಗೆ ಬೀಳುತ್ತಾನೆ, ... ತನ್ನ ಹಾಸಿಗೆಯ ಮೇಲಿಂದ.

ಒಬ್ಬ ತರುಣ ವಿದ್ಯಾರ್ಥಿ ಮರುದಿನದ ಮುಂಜಾವಿನ ಸಮಯಕ್ಕಾಗಿ ಒಂದು ದೀರ್ಘ ನಿಬಂಧವನ್ನು ತಯಾರಿಸಬೇಕಾಗಿತ್ತು. ದಿನದ ಕಾರ್ಯದಿಂದ ದಣಿದು ಅವನು ಮನೆಗೆ ಬರುತ್ತಿರುವಾಗ "ನಂತರ ಆ ಕಾರ್ಯ ಕೈಕೊಳ್ಳುವೆ" ಎಂದು ತನಗೆ ತಾನೇ ಹೇಳಿಕೊಂಡಿದ್ದ. ತದನಂತರ ತಾನು ಬೇಗ ನಿದ್ದೆ ಮಾಡಿದರೆ ಬೆಳಿಗ್ಗೆ ಬೇಗ ಏಳಲು ಸಾಧ್ಯವಾಗುತ್ತದೆ ಮತ್ತು ತನ್ನ ಕಾರ್ಯವನ್ನು ತೀವ್ರಗತಿಯಿಂದ ಕೈಕೊಳ್ಳಬಹುದು ಎಂದು ಯೋಚಿಸಿದ. "ಈಗ ನಿದ್ದೆ ಮಾಡುವಾ, ನಾಳೆ ನಾನು ಹೆಚ್ಚು ಒಳ್ಳೆಯ ರೀತಿಯಲ್ಲಿ ಆ ಕಾರ್ಯವನ್ನು ಕೈಕೊಳ್ಳುವಂತಾಗಬಹುದು, ಅದನ್ನು

ಮನಸ್ಸಿನಲ್ಲಿಟ್ಟುಕೊಂಡು ನಿದ್ದೆ ಮಾಡುತ್ತೇನೆ" ಎಂದು ತನಗೆ ತಾನೇ ಹೇಳಿಕೊಂಡ. ಅವನು ಅದನ್ನು ಎಷ್ಟು ನಿಜವಾಗಿ ಹೇಳಿಕೊಂಡಿದ್ದನೆಂಬುದು ಅವನಿಗೆ ತಿಳಿದಿರಲಿಲ್ಲ. ನಾವು ವರ್ಣಿಸಿ ಹೇಳಿದ ಭಯಾನಕ ದುಃಸ್ವಪ್ನದಿಂದ ಅವನ ನಿದ್ದೆಗೆ ತೊಂದರೆ ಉಂಟಾಯಿತು, ಕೆಳಗೆ ಬೆಚ್ಚಿ ಬಿದ್ದ ಅವನಿಗೆ ತಟಕ್ಕನೆ ಎಚ್ಚರವಾಯಿತು. ತಾನು ಕಂಡ ಕನಸನ್ನು ಕುರಿತು ಯೋಚಿಸಿದ ಅವನು "ಆದರೆ ಅದು ಬಹಳ ಸ್ಪಷ್ಟವಾಗಿದೆ, ನಂತರ ಅನುಸರಿಸಿದರಾದೀತು ಎಂದು ಹೇಳುವ ಪಥ ಅದಾಗಿದೆ, ಆ ರಸ್ತೆ ನಾಳಿನ ರಸ್ತೆ, ಆ ಭವ್ಯ ಭವನ ಏನೂ ಇಲ್ಲದುದರ ಕೋಟೆ" ಎಂದು ಅವನು ಉದ್ಗಾರ ತೆಗೆದ. ತನ್ನ ಜಾಣ್ಮೆಯಿಂದ ಉತ್ತೇಜಿತನಾದ ಅವನು ಇನ್ನೆಂದಿಗೂ ಇಂದು ಮಾಡಬಹುದಾದುದನ್ನು ನಾಳೆಗೆಂದು ಮುಂದೂಡುವುದಿಲ್ಲ ಎಂಬ ಪಣತೊಟ್ಟು ಕಾರ್ಯಪ್ರವೃತ್ತನಾದ.

(ಶ್ರೀಮಾತೆಯವರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಎಂದರೆ 1893ರಲ್ಲಿ ಬರೆದ ಲೇಖನ) (2/1–4)

*

## ಸ್ವಪ್ನ ನೌಕೆ (ಕವಿತೆ)

ಪ್ರಜ್ವಲಿಸುತಿಹ ಲಲಾಟವನು ರವಿ ಪ್ರಕಾಶಿತ ಹೊನ್ನ ದೇಹವನು ಹೊತ್ತು
ಸ್ವಪ್ನದ ಜ್ವಾಲೆಯಿಂದಾದ ನೌಕೆಯಲಿ ನನ್ನ ಬಳಿ ಬಂದವರು ಯಾರು?
ಮಧುರ ರಹಸ್ಯ ಗೊಣಗಾಟದಿಂದ ಮೌನ ಕರಗಿ ಹೋಗಿಹುದು,
"ಈಗ ಬರುವಿಯಾ ನೀನು, ಬರಲು ಹೃದಯದ ಜ್ವಾಲೆ ಸಿದ್ಧವಿದೆಯೆ?"

ಹೃದಯ ಗಹ್ವರದಲಿ ಅಡಗಿದ್ದ ಏನೋ ಒಂದು ನಡುಗಿಹುದು
ನೆಚ್ಚಿಕೊಂಡಿದ್ದ ಜೀವನದ ಸಂತಸಗಳನ್ನೆಲ್ಲ ನೆನಪಿಸಿಕೊಂಡಿಹುದು
ಎಂದೆಂದಿಗೂ ಬಿಟ್ಟುಕೊಟ್ಟು ಕಳೆದುಕೊಳ್ಳಬೇಕಾದ ಸೌಭಾಗ್ಯವನು ಕಲ್ಪಿಸಿಕೊಂಡಿಹುದು
ನೌಕೆ ಸಾಗಿ ಹೋಯಿತು, ಹೊನ್ನ ಬಣ್ಣದ ದೇವ ಮಾಯವಾದ.

ಈಗಂತರಂಗದಲಿ ವಿಶ್ವದ ಎದೆಯ ಹುರುಳಿಲ್ಲದಿರುವಿಕೆ ವಾಸಿಸುತಿಹುದು
ಕಾರಣ ಪ್ರೇಮ ಮರಣಿಸಿತು ಹಳೆಯ ಸಂತಸ ಕೊನೆಗೊಂಡಿತು.
ಸೌಭಾಗ್ಯ ಪಲಾಯನ ಮಾಡಿ ಎಂದೆಂದಿಗೂ ಹೋಗಿಬಿಟ್ಟಿರುವುದರಿಂದಾಗಿ ಶೂನ್ಯವಾವರಿಸಿಹುದು
ಹೊನ್ನ ಬಣ್ಣದ ದೇವ, ಕನಸಿನ ನೌಕೆ ಇನ್ನು ಬರುವುದಿಲ್ಲ.

**(2/576)** – ಶ್ರೀ ಅರವಿಂದರು

*



# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಸೆಪ್ಟೆಂಬರ್ 5, 2013ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಮತ್ತು ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ ವತಿಯಿಂದ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ಬೆಳಗ್ಗೆ 9.30 ರಿಂದ 12.30ರ ವರೆಗೆ ವಿದ್ಯಾರ್ಥಿಗಳು ಕಾರ್ಯಕ್ರಮ ನಡೆಸಿಕೊಟ್ಟರು. ಭೋಜನ ವಿರಾಮದ ಬಳಿಕ ಶಾಲಾ ಆಡಳಿತ ಮಂಡಳಿಯವರು ನಡೆಸಿಕೊಟ್ಟ ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಅಧ್ಯಕ್ಷರಾದ ಶ್ರೀಮಾನ್ ಅಜಿತ್ ಸಬ್ನೀಸ್ ವಹಿಸಿ, ಅಧ್ಯಾಪಕರ ವೃತ್ತಿ ಮಹತ್ವದ ಬಗ್ಗೆ ವಿವರಿಸಿದರು. ಶಾಲೆಯ ಆಡಳಿತಾಧಿಕಾರಿ ಮತ್ತು ಪ್ರಾಂಶುಪಾಲರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ದಿನಾಂಕ 17/9/2013 ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಸಂಸ್ಥೆಯ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ದಿನವಾಗಿತ್ತು. ಪ್ರತಿಯೊಬ್ಬ ವಿದ್ಯಾಕಾಂಕ್ಷಿಯ ಆದರ್ಶ ವ್ಯಕ್ತಿ ಡಾ॥ ಎಪಿಜೆ ಅಬ್ದುಲ್ ಕಲಾಂ ಸಂಸ್ಥೆಯ ಬೆಳ್ಳಿಹಬ್ಬದ ಉದ್ಘಾಟನೆಯನ್ನು ನೆರವೇರಿಸಿದ ದಿನ ಅದಾಗಿತ್ತು. ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ ಕಲಾಂಜೀ ನೇರವಾಗಿ ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ತೊಡಗಿದರು. ಪ್ರತಿಯೊಬ್ಬರನ್ನು ತಮ್ಮ ಮಾತಿನ ಮೋಡಿಯಲ್ಲಿ ಸಿಲುಕಿಸಿದ ಮಾಜಿ ರಾಷ್ಟ್ರಪತಿಗಳು ಭಾವೀ ಭಾರತದ ಪ್ರಜೆಗಳು ದೇಶದ ಅಭಿವೃದ್ಧಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕು, ಪ್ರತಿಯೊಬ್ಬರಿಗೂ ಗುರಿ ಏಕಿರಬೇಕು ಎಂಬುದರ ಬಗ್ಗೆ ಮನದಟ್ಟು ಮಾಡಿದರು. ವೇದಿಕೆಯಲ್ಲಿ ಶಾಲಾ ಅಧ್ಯಕ್ಷರಾದ ಶ್ರೀ ಅಜಿತ್ ಸಬ್ನೀಸ್, ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀಯುತ ಶ್ರೀಜಿ, ಜಯನಗರ ವಿಧಾನಸಭಾ ಸದಸ್ಯ ಶ್ರೀ ವಿಜಯಕುಮಾರ್, ಶಾಲಾ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ಮತ್ತು ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬ ಉಪಸ್ಥಿತರಿದ್ದರು. ಸಂಸ್ಥೆಯ ವಿದ್ಯಾರ್ಥಿಗಳು, ಶಿಕ್ಷಕ, ಶಿಕ್ಷಕೇತರ ವೃಂದದವರು ಶ್ರೀ ಅರವಿಂದ ಸಂಕೀರ್ಣ ಟ್ರಸ್ಟ್‌ನ ಧರ್ಮದರ್ಶಿಗಳು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.



*"A hero fears nothing, complains of nothing and never gives way."*

- The Mother

**RNI No. 22511/1971**
No. of Pages **28 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.